KAHS610027982014

**1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.**

ಉಪಸ್ಥಿತರು : **ಶ್ರೀ ಪುರುಷೋತ್ತಮ ಟಿ.ಪಿ.** ಬಿ.ಎ., ಎಲ್.ಎಲ್.ಬಿ.
1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆ:472/2014**

**ದಿನಾಂಕ: 08 ನೇ ಏಪ್ರಿಲ್ 2026**

ವಾದಿಃ ಶ್ರೀಮತಿ ಶಾರದಮ್ಮ
ಕೋಂ ಲೇಟ್ ವಿಜಯ ಕುಮಾರ,
ಸುಮಾರು 55 ವರ್ಷ ವಯಸ್ಸು,
ವಾಸಃ ಮಾದಾಪುರ ಗ್ರಾಮ,
ಕಿಕ್ಕೇರಿ ಹೋಬಳಿ,
ಕೆ. ಆರ್. ಪೇಟೆ ತಾಲ್ಲೂಕು,
ಮಂಡ್ಯ ಜಿಲ್ಲೆ.

(ಪರವಾಗಿ ಶ್ರೀ. ಸಿ.ವಿ.ಪಿ. ವಕೀಲರು )

ವಿರುದ್ಧ

ಪ್ರತಿವಾದಿಗಳುಃ 1. ರವಿ ಬಿನ್ ಯಾಲಕ್ಕಿ ಶೆಟ್ಟಿ
ವಯಸ್ಸು ಸುಮಾರು 42 ವರ್ಷ,

2 ಲಕ್ಷ್ಮೀಶ ಬಿನ್ ಯಾಲಕ್ಕಿಶೆಟ್ಟಿ ,
ವಯಸ್ಸು ಸುಮಾರು 35 ವರ್ಷ,

ಇಬ್ಬರು ಪ್ರತಿವಾದಿಗಳ ವಿಳಾಸ:
ಗುರಿಗಾರನಹಳ್ಳಿ ಗ್ರಾಮ,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

(ಪರವಾಗಿ ಶ್ರೀ.ಡಿ.ಎಸ್.ವಿ ವಕೀಲರು)

| | | | | |
|---|---|---|---|---|
| 1. ದಾವಾ ದಾಖಲು ಮಾಡಿದ ದಿನಾಂಕ | : | 02-09-2014 | | |
| 2. ದಾವಾ ಸ್ವರೂಪ | : | ಘೋಷಣೆ ಮತ್ತು ನಿರ್ದೇಶನಾತ್ಮಕ ಕಾಜ್ಞೆ ಕೋರಿ | | |
| 3. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | : | 20-09-2016 | | |
| 4. ತೀರ್ಪು ಉಚ್ಚರಿಸಿದ ದಿನಾಂಕ | : | 08-04-2026 | | |
| Total duration | : | Year/s | Month/s | Day/s |
| | | 11 | 07 | 06 |

(ಪುರುಷೋತ್ತಮ ಟಿ.ಪಿ.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

ಃತೀರ್ಪು ಃ

ವಾದಿಯು ಪ್ರಸ್ತುತ ದಾವೆಯನ್ನು ಸಲ್ಲಿಸಿ, ವಾದಿಯ ದಾವಾ ಷೆಡ್ಯೂಲ್ ಸ್ವತ್ತಿಗೆ ವಾದಿಯೇ ಮಾಲೀಕಳೆಂದು ಘೋಷಿಸಬೇಕಾಗಿಯೂ, ದಾವಾ ಷಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಡುವಂತೆಯು ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕಾಗಿಯೂ, ಘನ ನ್ಯಾಯಾಲಯಕ್ಕೆ ತೋರಿ ಬರುವ ಇತರೆ ಎಲ್ಲಾ ತಾಜಾ ಪರಿಹಾರಗಳನ್ನು ಮತ್ತು ನ್ಯಾಯಾಲಯಕ್ಕೆ ತೋಚಿದ ಇತರೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

**2**. <u>ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ</u>**:**

ವಾದಿಯು ದಾವಾ ಷಡ್ಯೂಲ್ ಸ್ವತ್ತನ್ನು ದಿನಾಂಕಃ 6-01-1992 ರಂದು ಅದರ ಪೂರ್ವ ಮಾಲೀಕರಾದ ಚಿದಂಬರ ಎಂಬುವವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಶುದ್ಧ ಕ್ರಯಕ್ಕೆ ಪಡೆದಿರುತ್ತಾಳೆ. ನಿವೇಶನವನ್ನು ಕ್ರಯಕ್ಕೆ ಪಡೆದಂದಿನಿಂದಲೂ ವಾದಿಯು ಅದರ ಹಕ್ಕುದಾರರಾಗಿ ಮಾಲೀಕಳಾಗಿದ್ದುಕೊಂಡು ಸ್ವಾಧೀನದಾರಳಾಗಿ ಅನುಭವಿಸಿಕೊಂಡು ಬರುತ್ತಿದ್ದು, ಸದರಿ ನಿವೇಶನದಲ್ಲಿ ಪ್ರತಿವಾದಿಯು ಆಕೆಯ ವಾಸಕ್ಕೆಂದು ಕಲ್ನಾರು ಶೀಟಿನಿಂದ ಚಿಕ್ಕದಾದ ಮನೆಯನ್ನು ಕಟ್ಟಿಕೊಂಡು ವಾಸಮಾಡಿಕೊಂಡು ಬರುತ್ತಿದ್ದು, ದಾವಾ ಷೆಡ್ಯೂಲ್ ನಿವೇಶನಕ್ಕೆ ಸಂಬಂಧಿಸಿದ ಖಾತೆ ಹಾಗೂ ಇನ್ನಿತರೆ ದಾಖಲಾತಿಗಳು ವಾದಿಯ ಹೆಸರಿನಲ್ಲಿರುತ್ತವೆ. ದಾವಾ ಷೆಡ್ಯೂಲ್ ನಿವೇಶನಕ್ಕೆ ಗ್ರಾಮ ಪಂಚಾಯತಿ ಡಿ.ನಂ.48 ಎಂಬುದಾಗಿ ಹೊಸ ನಂಬರನ್ನು

ನೀಡಲಾಗಿರುತ್ತದೆ. ಪ್ರತಿವಾದಿಯರು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೋಕು, ಡಿ.ಕಾಳೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಖಾತೆ ನಂ.68 ರಲ್ಲಿರುವ ಪೂರ್ವ-ಪಶ್ಚಿಮ: 40 ಅಡಿ, ದಕ್ಷಿಣ-ಉತ್ತರ :60 ಅಡಿ ವಿಸ್ತೀರ್ಣ, ಪೂರ್ವಕ್ಕೆ: ನವೀನ್‌ರವರ ನಿವೇಶನ, ಪಶ್ಚಿಮಕ್ಕೆ: 20 ಅಡಿ ರಸ್ತೆ, ಉತ್ತರಕ್ಕೆ: ಹೇಮಲತಾರವರ ನಿವೇಶನ, ದಕ್ಷಿಣಕ್ಕೆ: ಗೋಪಿನಾಥ ಶಾಸ್ತ್ರಿಯವರ ನಿವೇಶನವಿರುವ ಚಕ್ಕುಬಂದಿ ಮಧ್ಯೆ ಇರುವ ನಿವೇಶನವನ್ನು 25-08-2005 ರಂದು ಸಿ.ವಿ.ಮಂಜಪ್ಪ ಎಂಬುವವರಿಂದ ಕೊಂಡುಕೊಂಡಿರುವುದಾಗಿಯೂ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರು ವಾದಿಯ ವಿರುದ್ಧ ಚನ್ನರಾಯಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಅಸಲು ದಾವಾ ಸಂಖ್ಯೆ:154/2009 ರಲ್ಲಿ ದಾವಾ ಸಲ್ಲಿಸಿದ್ದರು. ಸದರಿ ದಾವೆಯಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯರ ಅಂದರೆ ಈ ದಾವಾದ ಪ್ರತಿವಾದಿಯರ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಉಂಟು ಮಾಡಬಾರದಂತೆ ಶಾಶ್ವತ ನಿರ್ಬಂಧಕಾಜ್ಞೆ ಡಿಕ್ರಿ ನೀಡಿರುತ್ತದೆ.

3. ದಾವಾ ಸ್ವತ್ತಿನ ಮೂಲ ಮಾಲೀಕರಾದ ಚಿದಂಬರ ಎಂಬುವವರು ನರಸಪ್ಪನವರಿಗೆ ಸೇರಿದ ಸ್ವತ್ತಿನ ಪಶ್ಚಿಮ ದಿಕ್ಕಿನ ಭಾಗದ ನಿವೇಶನವನ್ನು ಸತ್ಯನಾರಾಯಣ ಎಂಬುವವರಿಗೆ ಮಾರಾಟ ಮಾಡಿದ್ದರು. ಸದರಿ ಸತ್ಯನಾರಾಯಣ ಎಂಬುವವರಿಂದಲೇ ನವೀನ್ ನಿವೇಶನವನ್ನು ಕ್ರಯಕ್ಕೆ ಪಡೆದಿರುತ್ತಾರೆ. ನವೀನ್ ಎಂಬುವವರ ನಿವೇಶನ ನರಸಪ್ಪ ಎಂಬುವವರ ಸ್ವತ್ತಿನ ಪಶ್ಚಿಮ ದಿಕ್ಕಿನ ಭಾಗದಲ್ಲಿ ಇರುತ್ತದೆ. ಸತ್ಯನಾರಾಯಣರವರಿಗೆ ಮಾರಾಟ ಮಾಡಿದ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಪೂರ್ವ ಪಶ್ಚಿಮ 40 ಅಡಿ ಹಾಗೂ

ದಕ್ಷಿಣೋತ್ತರ 120 ಅಡಿಗಳ ವಿಸ್ತೀರ್ಣದ ನಿವೇಶನವನ್ನು ಚಿದಂಬರರವರು ಪ್ರತಿವಾದಿಯರು ಕ್ರಯಕ್ಕೆ ಪಡೆದ ಸ್ವತ್ತಿನ ಪೂರ್ವ ಮಾಲೀಕರಾದ ಸಿ.ವಿ. ಮಂಜಪ್ಪನವರಿಗೆ ಮಾರಾಟ ಮಾಡಿರುತ್ತಾರೆ. ಚಿದಂಬರರವರಿಂದ ಬರೆಸಿಕೊಂಡ ದಿನಾಂಕ:21-10-1985 ರ ಕ್ರಯಪತ್ರದಲ್ಲಿ ಸಿ.ವಿ.ಮಂಜಪ್ಪನವರು ಕ್ರಯಕ್ಕೆ ಪಡೆದ ಸ್ವತ್ತಿನ ಪೂರ್ವ ಭಾಗದ ನಿವೇಶನವು ಸತ್ಯನಾರಾಯಣರವರ ನಿವೇಶನ ಎಂಬುದಾಗಿ ನಮೂದಿಸಲಟ್ಟಿರುತ್ತದೆ. ಸಿ.ವಿ ಮಂಜಪ್ಪನವರು ಪ್ರತಿವಾದಿಯರಿಗೆ ಬರೆದುಕೊಟ್ಟಿರುವ ಸ್ವತ್ತಿನ ಡಿಮ್ಯಾಂಡ್ ರಿಜಿಸ್ಟರ್ ನಂಬರ್ 68. ಬ್ಲಾಕ್ 2. ಸ್ವತ್ತಿನ ಸಂಖ್ಯೆ 68 ಆಗಿದ್ದು, ಪೂರ್ವ- ಪಶ್ಚಿಮವಾಗಿ 40 ಅಡಿ ಹಾಗೂ ದಕ್ಷಿಣೋತ್ತರವಾಗಿ 60 ಅಡಿಗಳಾಗಿದ್ದು, ನಿವೇಶನದ ಪೂರ್ವಕ್ಕೆ ಸತ್ಯನಾರಾಯಣ ಅಥವಾ ಅವರಿಂದ ಕ್ರಯಕ್ಕೆ ಪಡೆದ ನವೀನ್‌ರವರ ನಿವೇಶನ ಎಂದು ನಮೂದು ಮಾಡುವ ಬದಲಾಗಿ ಉದ್ದೇಶಪೂರ್ವಕವಾಗಿಯೇ ಜವರೇಗೌಡರ ನಿವೇಶನ ಎಂದು ತಪ್ಪಾಗಿ ನಮೂದುಮಾಡಿ ಕ್ರಯಪತ್ರ ಬರೆದುಕೊಡಲಾಗಿರುತ್ತದೆ. ಸಿ.ವಿ. ಮಂಜಪ್ಪನವರು ಕ್ರಯಕ್ಕೆ ಪಡೆದ 40X120 ಅಡಿಗಳ ಪೈಕಿ 40X60 ಅಡಿ ವಿಸ್ತೀರ್ಣದ ನಿವೇಶನವನ್ನು ವಾದಿಯರಿಗೆ ಮಾರಾಟ ಮಾಡುವ ಮುಂಚೆಯೇ ಅಂದರೆ ದಿನಾಂಕ:16-08-1996 ರಂದು ಹೇಮಲತಾ ಎಂಬುವವರಿಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ನಿವೇಶನದ ಪೂರ್ವಕ್ಕೆ ಸಿ.ವಿ.ನವೀನ್‌ರವರ ನಿವೇಶನ ಎಂಬುದಾಗಿ ಸರಿಯಾದ ಚಕ್ಕುಬಂದಿಯನ್ನು ನಮೂದಿಸಿರುತ್ತಾರೆ. ವಾದಿ ಮುಂದುವರೆದು, ವಾದಿ ಹಾಗೂ ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ನಿವೇಶನಗಳ ಖಾತೆ ನಂಬರ್ ಹಾಗೂ ಸ್ವತ್ತಿನ ನಂಬರ್ ಬೇರೆ ಬೇರೆಯಾಗಿರುತ್ತವೆ. ಪ್ರತಿವಾದಿಯರಿಗೆ ಬರೆದುಕೊಟ್ಟಿರುವ ಕಯಪತ್ರದಲ್ಲಿ

ನಮೂದಿಸಿರುವ ಖಾತಾ ನಂಬರ್, ಸ್ವತ್ತಿನ ಸಂಖ್ಯೆ ಹಾಗೂ ಚಕ್ಕುಬಂದಿ ಮಧ್ಯದಲ್ಲಿರುವ ಅಂದರೆ ಜವರೇಗೌಡರಿಗೆ ಸೇರಿದ ನಿವೇಶನದ ಪಶ್ಚಿಮಕ್ಕಿರುವ ನಿವೇಶನದಲ್ಲಿ ವಾದಿಯು ಮನೆಯನ್ನು ಕಟ್ಟಿಕೊಂಡು ವಾಸಮಾಡಿಕೊಂಡು ಬಂದಿದ್ದು ಸ್ವಾಧೀನಾನುಭವ ಹೊಂದಿದ್ದರು. ಆದರೆ, ಪ್ರತಿವಾದಿಯರು ಕ್ರಯಕ್ಕೆ ಪಡೆದುಕೊಂಡಿರುವ ನಿವೇಶನದ ಖಾತಾ ನಂಬರಿಗೂ, ಸ್ವತ್ತಿನ ನಂಬರಿಗೂ ದಾವಾ ಷೆಡ್ಯೂಲ್ ಸ್ವತ್ತಿಗೆ ತೋರಿಸಿರುವ ಚಿಕ್ಕುಬಂದಿಯಲ್ಲಿನ ಜವರೇಗೌಡರ ನಿವೇಶನದ ಪಶ್ಚಿಮಕ್ಕಿರುವ ವಾದಿಗೆ ಸೇರಿದ ನಿವೇಶನಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ವಾದಿಗೆ ಸೇರಿದ ದಾವಾ ಷೆಡ್ಯೂಲ್ ಸ್ವತ್ತಿನ ಚಕ್ಕುಬಂದಿಗೂ ಮತ್ತು ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ನಿವೇಶನದ ಚಿಕ್ಕುಬಂದಿಗೂ ಯಾವುದೇ ವಿಧದಲ್ಲಿಯೂ ತಾಳೆ ಆಗುವುದಿಲ್ಲ. ವಾದಿಗೆ ಸೇರಿದ ಸ್ವತ್ತನ್ನು ಅಕ್ರಮವಾಗಿ ತಮ್ಮದಾಗಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ವಾದಿಯು ಕಟ್ಟಿಸಿರುವ ಮನೆಯನ್ನು ಪ್ರತಿವಾದಿಯರು ಅವರಿಗೆ ಸೇರಿದ್ದೆಂದು ಸುಳ್ಳು ಸಂಗತಿಗಳನ್ನು ಸೃಷ್ಟಿಸಿಕೊಂಡು ದಾವೆಯನ್ನು ಸಲ್ಲಿಸಿದ್ದರು. ದಾವಾ ಸ್ವತ್ತಿನ ಪೂರ್ವಕ್ಕೆ ಹಾಲಿ ಜವರೇಗೌಡರ ಸ್ವಾಧೀನದಲ್ಲಿರುವ ನಿವೇಶನವೆಂದು ಸುಳ್ಳು ಚಕ್ಕುಬಂದಿಯನ್ನು ನೀಡಿರುತ್ತಾರೆ. ಪ್ರತಿವಾದಿಯರು ಕ್ರಯಕ್ಕೆ ಪಡೆದ ನಿವೇಶನ ಎಲ್ಲಿದೆ ಎಂಬುದನ್ನೇ ಅವರು ನಿರ್ದಿಷ್ಟವಾಗಿ ಗುರುತಿಸಿಕೊಂಡಿರುವುದಿಲ್ಲ. ಪ್ರತಿವಾದಿಯರು ಕ್ರಯಕ್ಕೆ ಪಡೆದಿದ್ದೇವೆಂದು ಹೇಳುವ ನಿವೇಶನದ ಪೂರ್ವಕ್ಕೆ ನವೀನ್ ಎಂಬುವರ ನಿವೇಶನವಿರುತ್ತದೆ ಎಂದು ನಮೂದಿಸಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಚಕ್ಕುಬಂದಿಯಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ಕಾಣಿಸಿರುವ ಜವರೇಗೌಡರ ಸ್ವಾಧೀನದಲ್ಲಿರುವ ಸ್ವತ್ತು ಹಾಗೂ ನವೀನ್

ಎಂಬುವವರ ನಿವೇಶನಗಳೆರಡು ಬೇರೆ ಬೇರೆಯಾಗಿದ್ದು, ಯಾವುದೇ ಸಂಬಂಧವಿರುವುದಿಲ್ಲ. ಪ್ರತಿವಾದಿಯರು ನವೀನ್ ಹಾಗೂ ಜವರೇಗೌಡರ ನಿವೇಶನ ಎರಡೂ ಒಂದೇ ಆಗಿರುತ್ತದೆ ಎಂದು ಸುಳ್ಳು ಸೃಷ್ಟನೆ ಮಾಡಿಕೊಂಡಿರುತ್ತಾರೆ. ಜವರೇಗೌಡರಿಗೆ ಸೇರಿದ 12 ನೇ ನಂಬರಿನ ನಿವೇಶನದ ಪಶ್ಚಿಮ ದಿಕ್ಕಿನ ಭಾಗದಲ್ಲಿರುವ ದಾವಾ ಷಡ್ಯೂಲ್ ಸ್ವತ್ತು ವಾದಿಗೆ ಸೇರಿದ ಸ್ವತ್ತಾಗಿರುತ್ತದೆ. ಆದುದರಿಂದ ಅಸಲು ದಾವಾ ಸಂಖ್ಯೆ: 154/2009 ರಲ್ಲಿ ಮಾಡಿರುವ ಡಿಕ್ರಿಯ ಲಾಭ ಪಡೆದ ಪ್ರತಿವಾದಿಯರು ವಾದಿಯು ಈಗ್ಗೆ ಒಂದು ವಾರದ ಹಿಂದೆ ಆಕೆಯ ಊರಾದ ಮಾದಾಪುರಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಕ್ರಮವಾಗಿ ದಾವಾ ಷೆಡ್ಯೂಲ್ ಮನೆಯ ಒಳಗೆ ಸೇರಿಕೊಂಡಿರುತ್ತಾರೆ. ಪ್ರತಿವಾದಿಯರ ಈ ಕೃತ್ಯವನ್ನು ವಾದಿಯು ಪ್ರಶ್ನಿಸಲಾಗಿ, ಪ್ರತಿವಾದಿಯರು ಅಕ್ರಮವಾಗಿ ಜನರ ಗುಂಪು ಕಟ್ಟಿಕೊಂಡು ಬಂದು ವಾದಿಯೊಂದಿಗೆ ಜಗಳ ಮಾಡಿ, ದಾವಾ ಷೆಡ್ಯೂಲ್ ಸ್ವತ್ತಿನ ಬಳಿ ಬರದಂತೆ ಬೆದರಿಕೆ ಹಾಕಿರುತ್ತಾರೆ. ಈ ಸಂಬಂಧವಾಗಿ ವಾದಿಯು ಸಂಬಂಧಪಟ್ಟ ಪೋಲೀಸ್ ಠಾಣೆಗೆ ದೂರು ನೀಡಿದರೂ, ನ್ಯಾಯಾಲಯದಿಂದ ಪ್ರತಿವಾದಿಯ ಪರ ಡಿಕ್ರಿಯಾಗಿರುತ್ತದೆ ಎಂದು ಪೋಲೀಸರು ವಾದಿಯು ನೀಡಿದ ದೂರನ್ನು ಸ್ವೀಕರಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗಿರುವ ಹಕ್ಕನ್ನು ಪ್ರತಿವಾದಿಯರು ಪ್ರಶ್ನಿಸಿದ್ದು, ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಅಕ್ರಮವಾಗಿ ಸ್ವಾಧೀನ ಹೊಂದಿರುತ್ತಾರೆ. ಪ್ರತಿವಾದಿಯರು ರಾಜಕೀಯ ಪ್ರಭಾವವುಳ್ಳ, ಹಣ ಮತ್ತು ಜನ ಬಲವುಳ್ಳ ಪ್ರತಿವಾದಿಯರ ಅಕೃತ್ಯವನ್ನು ತಡೆಗಟ್ಟುವಷ್ಟು ಅಬಲೆಯು ಹಾಗೂ ಒಬ್ಬೊಂಟಿಗಳಾದ ವಾದಿಯು ಶಕ್ತಳಾಗಿರುವುದಿಲ್ಲ. ಆದ್ದರಿಂದ ಅನ್ಯಮಾರ್ಗವಿಲ್ಲದೇ ದಾವಾ ಷೆಡ್ಯೂಲ್ ಸ್ವತ್ತಿಗೆ ವಾದಿಯೇ ಹಕ್ಕುಧಾರಿ

ಮಾಲೀಕಳೆಂದು ಘೋಷಿಸತಕ್ಕ ಬಗ್ಗೆಯೂ ಹಾಗೂ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಹಾಗೂ ದಾವಾ ಬಿಟ್ಟುಕೊಡುವಂತೆ ಪ್ರತಿವಾದಿಯರಿಗೆ ನಿರ್ದೇಶಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ

4. ನ್ಯಾಯಾಲಯದಿಂದ ಪ್ರತಿವಾದಿಗಳಿಗೆ ಸಮನ್ಸ್ ಜಾರಿಯಾದ ನಂತರ ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ, ಪ್ರತಿವಾದಿಯರು ವಾದಿಯರ ವಾದ ಪತ್ರವನ್ನು ಬಲವಾಗಿ ವಿರೋಧಿಸಿ, ಒಂದು ವಿವರವಾದ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಗಳು ತಮ್ಮ ಲಿಖಿತ ತಕರಾರಿನಲ್ಲಿ ದಾವಾ ತಂದಿರುವ ರೂಪದಲ್ಲಿ ನಿಲ್ಲತಕ್ಕದ್ದಲ್ಲ ಈ ರೀತಿ ದಾವಾ ತರಲು ವಾದಿಗೆ ಅರ್ಹತೆ ಹಾಗೂ ಸಾಮರ್ಥ್ಯಗಳಿರುವುದಿಲ್ಲ. ಈ ಕಾರಣಕ್ಕಾಗಿಯೇ ದಾವಾ ವಜಾ ಆಗಬೇಕಾಗಿರುತ್ತದೆ. ದಾವಾ 3 ನೇ ಖಂಡಿಕೆಯ ಸಂಗತಿಗಳು ಭಾಗಶಃ ಸತ್ಯವಾಗಿರುತ್ತವೆ, ಈ ಪ್ರತಿವಾದಿಯರು ಕೊಂಡುಕೊಂಡಿರುವ ನಿವೇಶನದ ಪೂರ್ವಕ್ಕೆಃನವೀನ್‌ರವರ ನಿವೇಶನವಿದ್ದು ಸದರಿ ನಿವೇಶನದಲ್ಲಿ ಈಗ ಹಾಲಿ ಜವರೇಗೌಡರು ಮನೆ ಕಟ್ಟಿಕೊಂಡು ವಾಸಿಸುತ್ತಿರುತ್ತಾರೆ. ಸತ್ಯನಾರಾಯಣರವರಿಗೆ ಮಾರಾಟ ಮಾಡಿದ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಪೂರ್ವ-ಪಶ್ಚಿಮಃ 40 ಅಡಿಗಳು ಹಾಗೂ ಉತ್ತರ-ದಕ್ಷಿಣಃ 120 ಅಡಿಗಳು ನಿವೇಶನವನ್ನು ಚಿದಂಬರವರು ಪ್ರತಿವಾದಿಯರು ಕ್ರಯಕ್ಕೆ ಪಡೆದಿರುವ ಸ್ವತ್ತಿನ ಮಾಲೀಕರಾದ ಸಿ.ವಿ, ಮಂಜಪ್ಪನವರಿಗೆ ಮಾರಾಟ ಮಾಡಿರುತಾರೆ ಎಂಬುದು ನಿಜವಾಗಿರುತ್ತದೆ. ಷೆಡ್ಯೂಲು ಸ್ವತ್ತನ್ನು ಪ್ರತಿವಾದಿಯರು ಅದರ ಪೂರ್ವ ಮಾಲೀಕರಾದ ಸಿ ವಿ ಮಂಜ್ಪನವರಿಂದ ದಿಃ 25-08-2005 ಕ್ರಯಪತ್ರದ ಮೂಲಕ ಕೊಂಡುಕೊಂಡು ಅಂದಿನಿಂದಲೂ ಸದರಿ ಸ್ವತ್ತಿಗೆ

ಹಕ್ಕುದಾರರೂ ಹಾಗೂ ಸ್ವಾಧೀನಾದರರಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. ಪ್ರತಿವಾದಿಯರ ಪೂರ್ವ ಮಾಲೀಕರಾದ ಸಿ.ವಿ. ಮಂಜಪ್ಪನವರು ಮೂಲ ಮಾಲೀಕರಾದ ಚಿದಂಬರ ಎಂಬುವವರಿಂದ ದಿನಾಂಕ:21-10-1985 ರಂದು ಕ್ರಯಕ್ಕೆ ಕೊಂಡುಕೊಂಡಂತಹ ಸ್ವತ್ತಾಗಿದ್ದು ಷೆಡ್ಯೂಲು ಸ್ವತ್ತು ಡಿ.ಕಾಳೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ನಿವೇಶನವಾಗಿದ್ದು, ಸದರಿ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಕ್ರಯಪತ್ರದ ರೀತ್ಯಾ ಪ್ರತಿವಾದಿಯರ ಹೆಸರಿಗೆ ಬಂದು ಷೆಡ್ಯೂಲು ಸ್ವತ್ತಿಗೆ ಪ್ರತಿವಾದಿಯರು ಕಂದಾಯ ವಗೈರೆಗಳನ್ನು ಪಾವತಿ ಮಾಡಿಕೊಂಡು ಹಕ್ಕುದಾರರಾಗಿ ಸ್ವಾಧೀನದಲ್ಲಿದ್ದುಕೊಂಡು ಬಂದಿರುತ್ತಾರೆ. ಪ್ರತಿವಾದಿಯರು ಷೆಡ್ಯೂಲು ಸ್ವತ್ತನ್ನು ಕೊಂಡುಕೊಂಡಾಗ ನಿವೇಶನವಾಗಿದ್ದು ಸದರಿ ಸ್ವತ್ತಿಗೆ ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯವರು ಪ್ರತಿವಾದಿಯರ ಹೆಸರಿಗೆ ಖಾತೆ ಮಾಡಿದ್ದು ಪ್ರತಿವಾದಿಯರು ಕಂದಾಯ ವಗೈರೆಗಳನ್ನು ಕ್ರಯದ ತಾರೀಖಿನಿಂದಲೂ ಪಾವತಿ ಮಾಡಿಕೊಂಡು ಹಕ್ಕುದಾರರಾಗಿ ಅನುಭವಿಸಿಕೊಂಡು ಬಂದು ಸದರಿ ಸ್ವತ್ತಿನಲ್ಲಿ ಮನೆ ಕಟ್ಟಲು ಗ್ರಾಮ ಪಂಚಾಯಿತಿಯಿಂದ ಪರವಾನಗಿಯನ್ನು ಪಡೆದಿದ್ದು, ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡು ಹಕ್ಕುದಾರರಾಗಿ ವಾಸ ಮಾಡುತ್ತಿರುತ್ತಾರೆ. ಈ ರೀತಿ ಕಟ್ಟಿದ ಕಟ್ಟಡಕ್ಕೆ ಗ್ರಾಮ ಪಂಚಾಯಿತಿಯಿಂದ ಅನುಮತಿ ಮೇಲೆ ಮೆಸ್ಕಾಂನಿಂದ ವಿದ್ಯುತ್ ಸಂಪರ್ಕ ಮತ್ತು ಗ್ರಾಮ ಪಂಚಾಯಿತಿಯಿಂದ ನೀರು ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಿಕೊಂಡು ಅನುಭವಿಸಿಕೊಂಡು ಬರುತ್ತಿರುತ್ತಾರೆ. ವಾದಿಗೆ ಆಗಲೀ ಅಥವಾ ಬೇರ್ಯಾರಿಗೆ ಆಗಲೀ ಸದರಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು ಸ್ವಾಧೀನ ಇರುವುದಿಲ್ಲ. ಈಗಿದ್ದಾಗ್ಯೂ

ಸಹ ವಾದಿಯು ಮತ್ತು ಅವರ ಕಡೆಯವರು ಷೆಡ್ಯೂಲು ಸ್ವತ್ತಿನ ಬಳಿ ಬಂದು ಪ್ರತಿವಾದಿಯರ ಅನುಭವಕ್ಕೆ ಅಡ್ಡಿಪಡಿಸಲು ಹಾಗೂ ತಂಟೆ ತಕರಾರು ಮಾಡಲು ಪ್ರಯತ್ನ ಮಾಡಿದ್ದರಿಂದ ಪ್ರತಿವಾದಿಯರು ಇದೇ ನ್ಯಾಯಾಲಯದ ಅಸಲು ದಾವಾ ಸಂಖ್ಯೆ: 154/09 ರಲ್ಲಿ ಈ ವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಕೇಸನ್ನು ದಾಖಲು ಮಾಡಿದ್ದು ಅದು ಡಿಕ್ರಿಯಾಗಿರುತ್ತದೆ. ನಂತರ ಸದರಿ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯೂ ಸಹ ವಜಾ ಆಗಿರುತ್ತದೆ. ಸದರಿ ಕೇಸು ಮುಕ್ತಾಯವಾದ ನಂತರ ಹತಾಶಳಾದ ವಾದಿಯು ಸೃಷ್ಠಿತ ಸಂಗತಿಗಳೊಂದಿಗೆ ಈ ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡಲು ದುರುದ್ದೇಶದಿಂದ ತನಗೆ ಇಲ್ಲದ ಸ್ವತ್ತಿಗೆ ಹಕ್ಕು ನಿರ್ಧಾರ ಹಾಗೂ ಸ್ವಾಧೀನವನ್ನು ಕೋರಿ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತಾರೆ. ಆದುದರಿಂದ, ಘನ ನ್ಯಾಯಾಲಯವು ಕೃಪೆ ಮಾಡಿ ವಾದಿಯು ತಂದಿರುವ ದಾವಾವನ್ನು ಪ್ರತಿವಾದಿಯರ ಖರ್ಚು ಸಮೇತ ವಜಾ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

5. ಈ ಮೇಲಿನ ವಾದ ಪ್ರತಿವಾದ ಪತ್ರಗಳ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಗಿನ ವಿವಾದಾಂಶಗಳನ್ನು ರೂಪಿಸಲಾಗಿದೆ:

-: **<u>ISSUES</u>** :-

*1. Whether the plaintiff proves that, she purchased the suit schedule site and as such she is the lawful owner of the said site?*

*2. Whether the plaintiff proves that, defendants have illegally taken possession of the said schedule site?*

*3. Whether the plaintiff is entitled to declaration that she is the owner of the suit schedule site?*

*4. Whether the plaintiff is entitled to relief sought for?*

*5. What order or decree ?*

6. ವಾದಿಯು ತಮ್ಮ ಸಾಧನೆಯ ರುಜುವಾತು ಬಾಬ್ತನ್ನು ರುಜುವಾತು ಪಡಿಸಲು ವಾದಿಯು ತನ್ನನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ನುಡಿದಿದ್ದು, ಒಟ್ಟು 16 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 16 ಎಂದು ಗುರುತಿಸಿಕೊಂಡಿರುತ್ತಾರೆ. ಮಂಜುಗೌಡ ರವರು ಪಿ.ಡಬ್ಲ್ಯೂ -2 ಎಂದು ಸಾಕ್ಷಿ ನುಡಿದಿದ್ದು, ಮಹೇಶ ರವರು ಪಿ.ಡಬ್ಲ್ಯೂ -3 ಎಂದು ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿ 1 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲೂ-1 ಎಂದು ನುಡಿದಿದ್ದು 15 ದಾಖಲೆಗಳನ್ನು ಹಾಜರುಪಡಿಸಿ ನಿಡಿ-1 ರಿಂದ 15 ಎಂದು ಗುರುತಿಸಿಕೊಂಡಿರುತ್ತಾರೆ.

**7.** ವಾದಿ ಮತ್ತು ಪ್ರತಿವಾದಿಯರ ವಾದ-ವಿವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

8. ಮೇಲಿನ ವಿವಾದಾಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

ವಿವಾದಾಂಶ-1: ನಕಾರಾತ್ಮಕವಾಗಿ

ವಿವಾದಾಂಶ-2: ನಕಾರಾತ್ಮಕವಾಗಿ

ವಿವಾದಾಂಶ-3: ನಕಾರಾತ್ಮಕವಾಗಿ

ವಿವಾದಾಂಶ-4: ನಕಾರಾತ್ಮಕವಾಗಿ

ವಿವಾದಾಂಶ-5: ಅಂತಿಮ ಆದೇಶದಂತೆ,

## ಕಾರಣಗಳು

9. ವಿವಾದಾಂಶ ಸಂಖ್ಯೆ **1** ರಿಂದ **3:** ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯಗಳ ಹಾಗೂ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸಲು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

10. ವಾದಿಯು ಪ್ರಸ್ತುತ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿ, ವಾದಿಯ ದಾವಾ ಷೆಡ್ಯೂಲ್ ಸ್ವತ್ತಿಗೆ ವಾದಿಯೇ ಮಾಲೀಕಳೆಂದು ಘೋಷಿಸಬೇಕಾಗಿಯೂ, ದಾವಾ ಷಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಡುವಂತೆಯು ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕಾಗಿ ನಿರ್ಬಂಧಕಾಜ್ಞೆಯನ್ನು ಆದೇಶಿಸಬೇಕೆಂದು ಮತ್ತು ನ್ಯಾಯಾಲಯಕ್ಕೆ ತೋಚಿದ ಇತರೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ

11. ಈ ಹಂತದಲ್ಲಿಯೇ ವಾದಿಯು ದಾಖಲಿಸಿರುವ ದಾಖಲೆಗಳ ಬಗ್ಗೆ ಚರ್ಚಿಸುವುದು ಅಗತ್ಯವಾಗಿರುತ್ತದೆ. ನಿ.ಪಿ-1 ದಿನಾಂಕಃ 06.01.1992 ರ ಕ್ರಯ ಪತ್ರವಾಗಿದ್ದು, ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿಯ ಮಾದಾಪುರ ಗ್ರಾಮದಲ್ಲಿ ವಾಸವಾಗಿರುವ ಎನ್.ಆರ್. ಶ್ರೀಕಂಠಯ್ಯ ನವರ ಮಗಳು

ಲೇಟ್ ವಿಜಯಕುಮಾರ ರವರ ಹೆಂಡತಿ ಶಾರದಮ್ಮ ನವರಿಗೆ ಹಾಸನದ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಚನ್ನರಾಯಪಟ್ಟಣ ಟೌನ್‌ನ ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ಲೇಟ್ ಹೆಚ್.ರಾಮಸ್ವಾಮಯ್ಯ ರವರ ಮಗ ಹೆಚ್.ಚಿದಂಬರ್ ರವರು ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿಯ ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿರುವ ನಿವೇಶನ ಖಾತಾ ನಂಬರ್.216/2 ನೇ ಬ್ಲಾಕ್ ರಲ್ಲಿನ 2 ನೇ ನಿವೇಶನ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 60 ಅಡಿ (40X60) ವುಳ್ಳದ್ದಕ್ಕೆ ಚಕ್ಕುಬಂದಿಃ ಪೂರ್ವಕ್ಕೆ-ಜವರೇಗೌಡ ರವರ 12 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ-ಇದೇ ನಂಬರಿನಲ್ಲಿ ಬಿಟ್ಟಿರುವ 20 ಅಡಿ ರಸ್ತೆ, ಉತ್ತರಕ್ಕೆ-ಕೇಶವ ಮೂರ್ತಿಯವರ 1 ನೇ ನಂಬರ್ ನ ನಿವೇಶನ, ದಕ್ಷಿಣಕ್ಕೆ-3 ನೇ ನಂಬರ್ ನ ನಿವೇಶನ ಈ ಮಧ್ಯೆ ಇರುವ ನಿವೇಶನವನ್ನು ಶುದ್ಧ ಕ್ರಯಕ್ಕೆ ಬರೆದು ಕೊಟ್ಟಿರುತ್ತಾರೆ. ನಿಪಿ-2, 2012-13 ನೇ ಸಾಲಿನ ಕರ ನಿರ್ಧರಣ ಪತ್ರವಾಗಿದ್ದು, ಶಾರದಮ್ಮ ಕೋಂ ಲೇಟ್ ವಿಜಯ ಕುಮಾರ್ ರವರಿಗೆ 40X60 ಅಡಿ ನಿವೇಶನ, ಡಿ.ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯ ಚಕ್ಕುಬಂದಿಃ ಪೂರ್ವಕ್ಕೆ-ಜವರೇಗೌಡ ರ 12 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ-20 ಅಡಿ ರಸ್ತೆ, ಉತ್ತರಕ್ಕೆ- ಎಸ್.ಕೇಶವ ಮೂರ್ತಿ ನಿವೇಶನ, ದಕ್ಷಿಣಕ್ಕೆ-3 ನೇ ನಂಬರಿನ ನಿವೇಶನ ಎಂದು ನಮೂದು ಆಗಿರುತ್ತದೆ. ನಿಪಿ-3, 2012-13 ನೇ ಸಾಲಿನ ಡಿಮ್ಯಾಂಡ್ ರಿಜಿಸ್ಟರ್ ನ ಪ್ರತಿಯಾಗಿದ್ದು, ಅಸೆಸ್ಮೆಂಟ್ ನಂ.48 ರಲ್ಲಿ ಶಾರದಮ್ಮ ಕೋಂ ಲೇಟ್ ವಿಜಯ ಕುಮಾರ್ ರವರು ಮಾಲೀಕರೆಂದು ನಮೂದಾಗಿದ್ದು, ಸದರಿ ದಾಖಲೆಯಲ್ಲಿ ಸ್ವತ್ತಿನ ವಿಸ್ತೀರ್ಣದ ವಿವರ,

ಚಕ್ಕುಬಂದಿ ಏನು ನಮೂದು ಮಾಡಿರುವುದಿಲ್ಲ. ನಿಪಿ-4 ಮತ್ತು 5 ಕಂದಾಯ ಪಾವತಿ ರಸೀದಿಗಳಾಗಿರುತ್ತದೆ. ನಿಪಿ-6 ದಿನಾಂಕಃ 4.2.1984 ರ ಧೃಡೀಕೃತ ನಕಲು ಕ್ರಯ ಪತ್ರವಾಗಿದ್ದು, ಚನ್ನರಾಯಪಟ್ಟಣ ಟೌನ್, ಅಗ್ರಹಾರ ಬೀದಿಯಲ್ಲಿ ವಾಸವಾಗಿರುವ ನಾಗರಾಜು ರವರ ಮಗ ಸತ್ಯನಾರಾಯಣ ರವರಿಗೆ ಇದೇ ಚನ್ನರಾಯಪಟ್ಟಣ ಟೌನ್ ಗಾಯತ್ರಿ ಬಡಾವಣೆಯಲ್ಲಿರುವ ಲೇಟ್ ರಾಮಸ್ವಾಮಿ ರವರ ಮಗ ಚಿದಾನಂದರರವರು ಸ.ನಂ.106/3 ರಲ್ಲಿ 3 ಎಕರೆ 28 ಗುಂಟೆ ಜಮೀನಿಗೆ ಚಕ್ಕು ಬಂದಿಃ ಪೂರ್ವಕ್ಕೆಃ ನರಸಪ್ಪನ ಜಮೀನು, ಪಶ್ಚಿಮಕ್ಕೆ- ತನ್ನ ಬಾಬ್ತು ಬೇರೆ ಜಮೀನು, ದಕ್ಷಿಣಕ್ಕೆ- ಹುಡ್ಕೊ ಮನೆಗಳು, ಉತ್ತರಕ್ಕೆ- ಹೊಳೆನರಸೀಪುರದ ರಸ್ತೆ ಈ ಮದ್ಯೆ ಇರುವ ಜಮೀನನ್ನು ಶುದ್ದ ಕ್ರಯಕ್ಕೆ ಕೊಟ್ಟಿರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-7 ದಿನಾಂಕಃ 21.10.1985 ರಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿಯ ಚನ್ನರಾಯಪಟ್ಟಣ ಟೌನ್ ನಲ್ಲಿ ವಾಸವಾಗಿರುವ ವಾಬೇಗೌಡ ರ ಮಗ ಸಿ.ಮಂಜಪ್ಪ ರವರಿಗೆ ಇದೇ ಚನ್ನರಾಯಪಟ್ಟಣ ಟೌನ್ ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ರಾಮಸ್ವಾಮಿ ರವರ ಮಗ ಚಿದಂಬರ್ ರವರು ಚನ್ನರಾಯಪಟ್ಟಣ ತಾಲ್ಲೂಕು ಕಾಳೇನಹಳ್ಳಿ ಗ್ರಾಮಕ್ಕೆ ಸೇರಿರುವ ಮತ್ತು ಅನ್ಯಸಂಕ್ರಮಣ ಮಂಜೂರಾಗಿ ತನ್ನ ಸ್ವಾಧೀನಾನುಭವದಲ್ಲಿರುವ ಸ್ವತ್ತು, ಪೂರ್ವಕ್ಕೆ -ಸತ್ಯನಾರಾಯಣರವರ ನಿವೇಶನ, ಪಶ್ಚಿಮಕ್ಕೆ- ತಾನು ಬಿಟ್ಟಿರುವ 20 ಅಡಿ ರಸ್ತೆ, ದಕ್ಷಿಣಕ್ಕೆ-ತನ್ನ ಬಾಬ್ತು ಸ್ವಂತ ನಿವೇಶನ, ಉತ್ತರಕ್ಕೆ- ಹೊಳೆ ನರಸೀಪುರ ರಸ್ತೆ, ಈ ಮದ್ಯೆ ಇರುವ ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ-120 ಅಡಿ ವಿಸ್ತೀರ್ಣದ ನಿವೇಶನವನ್ನು ಕ್ರಯ ಮಾಡಿಕೊಟ್ಟಿರುವುದಾಗಿ ನಮೂದು ಆಗಿರುತ್ತದೆ. ನಿಪಿ-8 ದಿನಾಂಕಃ

6.12.1990 ರಂದು ಚನ್ನರಾಯಪಟ್ಟಣ ಟೌನ್‌ನ ನಾಗಸಮುದ್ರ ರಸ್ತೆಯಲ್ಲಿ ವಾಸವಾಗಿರುವ ಶಂಕರ್ ರವರ ಮಗ ನವೀನ್ ಕುಮಾರ್ ರವರಿಗೆ ಚನ್ನರಾಯಪಟ್ಟಣ ಟೌನ್ ಅಗ್ರಹಾರ ಬೀದಿಯಲ್ಲಿ ವಾಸವಾಗಿರುವ ನಾಗರಾಜುರವರ ಮಗ ಸತ್ಯನಾರಾಯಣರಾವ್ ಅವರು ಬರೆಸಿಕೊಟ್ಟ ದೃಡೀಕೃತ ನಕಲು ಕ್ರಯ ಪತ್ರವಾಗಿರುತ್ತದೆ. ಸದರಿ ದಾಖಲೆಯ ಪ್ರಕಾರ, ಚನ್ನರಾಯಪಟ್ಟಣದ ಡಿ.ಕಾಳೇನಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಖಾತಾ ನಂ.218 ರಲ್ಲಿರುವ ಪೂರ್ವ-ಪಶ್ಚಿಮ 40 ಅಡಿ, ದಕ್ಷಿಣೋತ್ತರ 120 ಅಡಿ ನಿವೇಶನಕ್ಕೆ ಚಕ್ಕು ಬಂದಿಃ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಚಿದಂಬರ್ ರವರ ನಿವೇಶನ, ಪಶ್ಚಿಮಕ್ಕೆ- ಮಂಜಪ್ಪ ನವರ ನಿವೇಶನ, ಉತ್ತರಕ್ಕೆ- ಹೊಳೆ ನರಸೀಪುರದ ರಸ್ತೆ ಈ ಮಧ್ಯೆ ಇರುವ ನಿವೇಶನವನ್ನು ಕ್ರಯ ಮಾಡಿರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-9 ಕಂದಾಯ ರಸೀದಿಯಾಗಿರುತ್ತದೆ. ನಿಪಿ-10, 2016-17 ನೇ ಸಾಲಿನ ಕರ ನಿರ್ಧರಣಾ ದಾಖಲೆಯಾಗಿದ್ದು, ಮನೆ 40X60 ಅಡಿ ಸ್ವತ್ತಿಗೆ ಚಕ್ಕು ಬಂದಿಃ ಪೂರ್ವಕ್ಕೆ- ಜವರೇಗೌಡರ 12 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ- 20 ಅಡಿ ರಸ್ತೆ, ಉತ್ತರಕ್ಕೆಃ ಎಸ್.ಕೇಶವ ಮಾರ್ತಿ ನಿವೇಶನ, ದಕ್ಷಿಣಕ್ಕೆ 3 ನೇ ನಂಬರ್ ನ ನಿವೇಶನ ಎಂಬುದಾಗಿ ನಮೂದು ಆಗಿರುತ್ತದೆ. ನಿಪಿ-11 ದಿನಾಂಕ 4-2-1984 ರ ದೃಢೀಕೃತ ನಕಲು ಕ್ರಯಪತ್ರವಾಗಿದ್ದು, ಚನ್ನರಾಯಪಟ್ಟಣ ಟೌನ್ ಅಗ್ರಹಾರ ಬೀದಿಯಲ್ಲಿ ವಾಸವಾಗಿರುವ ನಾಗರಾಜು ರವರ ಮಗ ಸತ್ಯನಾರಾಯಣ ರವರಿಗೆ ಚನ್ನರಾಯಪಟ್ಟಣ ಟೌನ್ ಗಾಯಿತ್ರಿ ಬಡಾವಣೆಯಲ್ಲಿ ವಾಸವಾಗಿರುವ ರಾಮಸ್ವಾಮಿ ಮಗ ಚಿದಂಬರ ರವರು ಬರೆಸಿಕೊಟ್ಟ ಕ್ರಯಪತ್ರವಾಗಿದ್ದು, ಸದರಿ ಚಕ್ಕು ಬಂದಿಃ ಪೂರ್ವಕ್ಕೆ- ನರಸಪ್ಪನ ಜಮೀನು, ಪಶ್ಚಿಮಕ್ಕೆ-

ತನ್ನ ಬಾಬ್ತು ಬೇರೆ ಜಮೀನು, ದಕ್ಷಿಣಕ್ಕೆ-ಹುಡ್ಕೊ ಮನೆಗಳು, ಉತ್ತರಕ್ಕೆ ಹೊಳೆನರಸೀಪುರ ರಸ್ತೆ, ಈ ಮದ್ಯೆ ಇರುವ ಸ.ನಂ. 108/3 ರಲ್ಲಿನ 3 ಎಕರೆ 28 ಗುಂಟೆ ಜಮೀನನ್ನು ಶುದ್ದ ಕ್ರಯಕ್ಕೆ ಕೊಟ್ಟಿರುವುದಾಗಿ ನಮೂದು ಆಗಿರುತ್ತದೆ. ನಿಪಿ 12 ದಿನಾಂಕಃ 11.9.1989 ರ ದೃಡೀಕೃತ ನಕಲು ಕ್ರಯ ಪತ್ರವಾಗಿದ್ದು, ಹಾಸನ ತಾಲ್ಲೂಕು ಕಸಬಾ ಹೋಬಳಿ ಹರಳಹಳ್ಳಿ ಗ್ರಾಮದ ಕರಿಯಪ್ಪ ನವರ ಮಗ ಆದಿ ಚನ್ನರಾಯಪ್ಟಣದಲ್ಲಿ ವಾಸವಾಗಿರುವ ಜವರೇಗೌಡರಿಗೆ ಚನ್ನರಾಯಪಟ್ಟಣದಲ್ಲಿರುವ ಮನ್ನಾರಾಮ್‌ಜಿ (ಮನ್ನಾ) ರವರ ಮಗ ದೀಪಾರಾಮ್ ರವರು ಡಿ.ಕಾಳೇನಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.106/4 ನೇ ಪೋಡ್ ಅನ್ಯ ಸಂಕ್ರಮಣವಾಗಿ ವಾಟರ್ ವರ್ಕ್ಸ್ ನಿಂದ ಪೂರ್ವ ಭಾಗಕ್ಕೆ 6 ನೇ ಸಾಲು 2 ನೇ ಬ್ಲಾಕ್ ಗೆ ಸೇರಿದ ಸೈಟ್ ನಂ.11 ಮತ್ತು 12 ಈ ಎರಡು ಸೈಟುಗಳು ಸೇರಿ ಸಹ ಪೂರ್ವ- ಪಶ್ಚಿಮ 40 ಅಡಿ, ದಕ್ಷಿಣೋತ್ತರ ವಾಗಿ ಪೂರ್ವ ದಿಕ್ಕಿನ 142 ಅಡಿ, ಪಶ್ಚಿಮ ದಿಕ್ಕಿನಲ್ಲಿ 132 ಅಡಿ ಉಳ್ಳ ನಿವೇಶನಕ್ಕೆ ಚಕ್ಕು ಬಂದಿಃ ಪೂರ್ವಕ್ಕೆ ಃ ನಾನು ಬಿಟ್ಟಿರುವ 20 ಅಡಿ ರಸ್ತೆ, ಪಶ್ಚಿಮಕ್ಕೆ ಃ ತನ್ನ ಬಾಬ್ತು, 1 ಮತ್ತು 2 ನೇ ನಂಬರ್ ಸೈಟು, ದಕ್ಷಿಣಕ್ಕೆ 13 ನೇ ನಂಬರ್ ಸೈಟು, ಉತ್ತರಕ್ಕೆ ಹೊಳೆ ನರಸೀಪುರಕ್ಕೆ ಹೋಗುವ ರಸ್ತೆ ಈ ಮದ್ಯೆ ಇರುವ 2 ಸೈಟುಗಳನ್ನು ಕ್ರಯಕ್ಕೆ ಕೊಟ್ಟಿರುತ್ತೇನೆ ಎಂದು ನಮೂದು ಆಗಿರುತ್ತದೆ. ನಿಪಿ-13, ದಿನಾಂಕಃ 6.12.1990 ರಂದು ಚನ್ನರಾಯಪಟ್ಟಣ ಟೌನ್ ರಸ್ತೆಯಲ್ಲಿ ವಾಸವಾಗಿರುವ ಶಂಕರ್ ರವರ ಮಗ ನವೀನ್ ಕುಮಾರ್ ರವರಿಗೆ ಚನ್ನರಾಯಪಟ್ಟಣ ಟೌನ್ ಅಗ್ರಹಾರ್ ಬೀದಿಯಲ್ಲಿ ವಾಸವಾಗಿರುವ ನಾಗರಾಜುವರ ಮಗ ಸತ್ಯನಾರಾಯಣರಾವ್ ಅವರು ಬರೆಸಿಕೊಟ್ಟ

ದೃಡೀಕೃತ ನಕಲು ಕ್ರಯ ಪತ್ರವಾಗಿರುತ್ತದೆ. ದಾಖಲೆಯ ಪ್ರಕಾರ ಚನ್ನರಾಯಪಟ್ಟಣದ ಡಿ.ಕಾಳೇನಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಖಾತಾ ನಂ.218 ರಲ್ಲಿರುವ ಪೂರ್ವ-ಪಶ್ಚಿಮ 40 ಅಡಿ, ದಕ್ಷಿಣೋತ್ತರ 120 ಅಡಿಗಳ ನಿವೇಶನಕ್ಕೆ ಚಕ್ಕು ಬಂದಿಃ ಪೂರ್ವ ಮತ್ತು ದಕ್ಷಿಣಕ್ಕೆ ಚಿದಂಬರ್ ರವರ ನಿವೇಶನ, ಪಶ್ಚಿಮಕ್ಕೆ-ಮಂಜಪ್ಪ ನವರ ನಿವೇಶನ, ಉತ್ತರಕ್ಕೆಃ ಹೊಳೆ ನರಸೀಪುರದ ರಸ್ತೆ, ಈ ಮಧ್ಯೆ ಇರುವ ನಿವೇಶನವನ್ನು ಕ್ರಯ ಮಾಡಿರುವುದಾಗಿ ನಮೂದು ಆಗಿರುತ್ತದೆ. ನಿಪಿ-14 ದಿನಾಂಕಃ06.01.1992 ರ ದೃಡೀಕೃತ ನಕಲು ಕ್ರಯಪತ್ರವಾಗಿದ್ದು, ಮಂಡ್ಯ ಜಿಲ್ಲೆ, ಕೆ. ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಮಾದಾಪುರ ಗ್ರಾಮದ ಶ್ರೀಕಂಠಯ್ಯನವರ ಮಗ ಕೇಶವ ಮೂರ್ತಿ ಅವರಿಗೆ ಚನ್ನರಾಯಪಟ್ಟಣ ಟೌನ್ ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ರಂಗಸ್ವಾಮಿ ರವರ ಮಗ ಚಿದಂಬರ್ ರವರು ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿಯ ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿರುವ ನಿವೇಶನ ವಿ.ಪಿ ಖಾತಾ ನಂಬರ್.216/2 ನೇ ಬ್ಲಾಕ್ ರಲ್ಲಿನ 1 ನೇ ನಿವೇಶನ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 60 ಅಡಿ (40X60) ವುಳ್ಳ ಉದ್ದಕ್ಕೆ ಚಕ್ಕುಬಂದಿಃ ಪೂರ್ವಕ್ಕೆ- ಜವರೇಗೌಡ ರವರ 11 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ-ಇದೇ ನಂಬರಿನಲ್ಲಿ ಬಿಟ್ಟಿರುವ 20 ಅಡಿ ರಸ್ತೆ, ಉತ್ತರಕ್ಕೆ- ಹೊಳೆನರಸೀಪುರ ರಸ್ತೆ, ದಕ್ಷಿಣಕ್ಕೆ - ಶಾರದಮ್ಮ ರವರ ಬಾಬ್ತು 2 ನೇ ನಂಬರ್ ನಿವೇಶನ ಈ ಮಧ್ಯೆ ಇರುವ ನಿವೇಶನವನ್ನು ಶುದ್ದ ಕ್ರಯಕ್ಕೆ ಬರೆದು ಕೊಟ್ಟಿರುತ್ತಾರೆ. ನಿಪಿ-15 ದಿನಾಂಕಃ 16.8.1996 ರ ದೃಡೀಕೃತ ನಕಲು ಕ್ರಯಪತ್ರ ಆಗಿದ್ದು, ಚನ್ನರಾಯಪಟ್ಟಣ ಟೌನ್ ನಲ್ಲಿ

ವಾಸವಾಗಿರುವ ವಾಬೇಗೌಡರ ಮಗ ಮಂಜಪ್ಪ ರವರು ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ ಕುಂಚೇನಹಳ್ಳಿ ಅಂಚೆ ಸೀಗೇನಹಳ್ಳಿ ಗ್ರಾಮದ ಜಯರಾಮ್ ರವರ ಧರ್ಮಪತ್ನಿ ಹೇಮಲತಾ ರವರಿಗೆ ಬರೆದುಕೊಟ್ಟ ಕ್ರಯಪತ್ರವಾಗಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ವಿವರಃ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು, ಡಿ.ಕಾಳೇನಹಳ್ಳಿ ಪಂಚಾಯಿತಿಗೆ ಸೇರಿದ ಖಾತಾ ಸ್ವತ್ತಿನ ನಂ.284 ರಲ್ಲಿವರ ಪೂರ್ವ-ಪಶ್ಚಿಮ 40 ಅಡಿ, ದಕ್ಷಿಣ ಉತ್ತರ 120 ಅಡಿವುಳ್ಳ ಸ್ವತ್ತಿನ ಪೈಕಿ ಉತ್ತರ ದಿಕ್ಕಿಗಿರುವ 1 ನೇ ನಿವೇಶನ ವನ್ನು ಕ್ರಯಕ್ಕೆ ಕೊಡುತ್ತಿದ್ದು ಅದರ ವಿಸ್ತೀರ್ಣಃ ಪೂರ್ಣ- ಪಶ್ಚಿಮ 40 ಅಡಿ, ಉತ್ತರ- ದಕ್ಷಿಣ 60 ಅಡಿಗಳು ಅದರ ಚಕ್ಕುಬಂದಿಃ ಪೂರ್ವಕ್ಕೆಃ ನವೀನ್ ರವರ ನಿವೇಶನ, ಪಶ್ಚಿಮಕ್ಕೆ ಃ20 ಅಡಿ ರಸ್ತೆ ಉತ್ತರಕ್ಕೆ ಃ ರಸ್ತೆ, ದಕ್ಷಿಣಕ್ಕೆ ನನ್ನ ಬಾಬ್ತು ಉಳಿಕೆ ಅರ್ಧ ನಿವೇಶನ ಎಂದು ನಮೂದು ಆಗಿರುತ್ತದೆ. ನಿಪಿ-16 ದಿನಾಂಕಃ25.08.2005 ರ ದೃಡೀಕೃತ ನಕಲು ಕ್ರಯಪತ್ರವಾಗಿದ್ದು, ಶ್ರವಣಬೆಳಗೊಳ ಹೋಬಳಿ ಗುರಿಕಾರನ ಹಳ್ಳಿಯಲ್ಲಿ ವಾಸವಾಗಿರುವ ಯಾಲಕ್ ಶೆಟ್ಟಿರವರ ಮಗ ರವಿ ಮತ್ತು ಲಕ್ಷೀಶ್ ರವರಿಗೆ ಚನ್ನರಾಯಪಟ್ಟಣ ಟೌನ್, ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ಹೋಬೇಗೌಡರ ಮಗ ಮಂಜಪ್ಪ ರವರು ಚನ್ನರಾಯಪಟ್ಟಣ ತಾಲ್ಲೂಕು ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಅನುಬಂಧ 1 ರ ಪ್ರಕಾರ ರಿಮ್ಯಾಂಡರ್ ನಂ.68 ಮತ್ತು ಬ್ಲಾಕ್ ನಂ.2 ರಲ್ಲಿರುವ ನಿವೇಶನದ ನಂ.6 ರ ನಿವೇಶನ ವಿಸ್ತೀರ್ಣ. ಪೂರ್ವ-ಪಶ್ಚಿಮ 40 ಅಡಿ, ಉತ್ತರ -ದಕ್ಷಿಣ 60 ಅಡಿಗಳ ನಿವೇಶನಕ್ಕೆ ಚಕ್ಕು ಬಂದಿಃ ಪೂರ್ವಕ್ಕೆಃ ಜವರೇಗೌಡರ 11 ನೇ ನಿವೇಶನ, ಪಶ್ಚಿಮಕ್ಕೆ ಃ20 ಅಡಿ ರಸ್ತೆ,

ಉತ್ತರಕ್ಕೆ: ಹೇಮಲತಾ ಮತು ಹೊಳೆನರಸೀಪುರ ರಸ್ತೆ ಮತ್ತು ದಕ್ಷಿಣಕ್ಕೆ ಬೇರೆಯವರ ನಿವೇಶನ ಎಂದು ನಮೂದು ಆಗಿರುತ್ತದೆ. ಸದರಿ ಸ್ವತ್ತು ಈ ಹಿಂದೆ ಡಿ. ಕಾಳೇನಹಳ್ಳಿ ಗ್ರಾಮದ ಸ. ನಂ. 106/4 ರಲ್ಲಿ 3 ಎಕರೆ 32 ಗುಂಟೆ ಜಮೀನು ಆಗಿದ್ದು, ನಂತರ ಅನ್ಯ ಸಂಕ್ರಮಣ ಮಂಜೂರಾಗಿರುವ ಸ್ವತ್ತಾಗಿರುತ್ತದೆ.

12. ಈ ಹಂತದಲ್ಲಿ ಪಿ.ಡಬ್ಲ್ಯೂ -1 ರವರ ಪಾಟೀ ಸವಾಲಿನ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿರುತ್ತದೆ. ಪಿ.ಡಬ್ಲ್ಯೂ -1 ರವರನ್ನು ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಈ ದಾವೆಯನ್ನು ಸ್ವಾಧೀನವನ್ನು ಕೋರಿ ಸಲ್ಲಿಸಿರುತ್ತೇನೆ. ಪ್ರತಿವಾದಿಗಳು 5-6 ವರ್ಷಗಳ ಹಿಂದೆ ದಾವಾ ಸ್ವತ್ತನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೆ. ಅತಿಕ್ರಮಣ ಮಾಡಿಕೊಂಡ ಸಮಯದಲ್ಲಿ ನಾನು ಮಾದಾಪುರಕ್ಕೆ ಹೋಗಿದ್ದೆ, ಅತಿಕ್ರಮಣ ಮಾಡಿದ್ದ 2-3 ದಿನಗಳಲ್ಲಿ ಅತಿಕ್ರಮಣ ಮಾಡುವ ವಿಚಾರ ತಿಳಿಯಿತು. ಈ ಸಂಬಂಧ ನಾನು ಪೊಲೀಸ್ ಠಾಣೆಗೆ ಪಿರ್ಯಾದಿ ಕೊಡಲು ಹೋಗಿದ್ದು, ಠಾಣೆಯಲ್ಲಿ ಪ್ರತಿವಾದಿಗಳ ಪರವಾಗಿ ಡಿಕ್ರಿಯಾಗಿದೆ ಎಂದು ಪಿರ್ಯಾದಿ ಸ್ವೀಕರಿಸುವುದಿಲ್ಲ. ಪ್ರತಿವಾದಿಗಳು ತನ್ನ ವಿರುದ್ಧ ಅಸಲು ದಾವಾ ಸಂಖ್ಯೆ 154/2009 ನ್ನು ದಾವಾ ಸ್ವತ್ತಿಗೆ ತೊಂದರೆ ನೀಡುತ್ತಿದ್ದೇನೆಂದು ದಾವಾ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಜಡ್ಜ್‌ಮೆಂಟ್ ಮತ್ತು ಡಿಕ್ರಿ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ಪ್ರತಿವಾದಿಗಳು ಹಿಂದಿನ ಮಾಲೀಕರಾದ ಸಿ. ಚಿದಂಬರಂ ರವರಿಂದ ಸಿ.ವಿ. ಮಂಜಪ್ಪ ಹಾಗೂ ಸಿ.ವಿ.ಮಂಜಪ್ಪ

ರವರಿಂದ 2005 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳಿಗಿಂತ ಮೊದಲು ನಾನು ಸಹ ಚಿದಂಬರಂರವರಿಂದಲೇ ಕ್ರಯಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಮುಂದುವರೆದು, ತಾನು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಮನೆ ಕಟ್ಟಿರುವ ಬಗ್ಗೆ ಲೈಸೆನ್ಸ್ ಪಡೆದಿಲ್ಲ. ಸದರಿ ಮನೆಗೆ ನಾನು ವಿದ್ಯುತ್ ಸಂಪರ್ಕ ಪಡೆದಿಲ್ಲ. ದಾವಾ ಸ್ವತ್ತು ಮೂಲತಃ ಕಂದಾಯದ ಜಮೀನು ಎಂದರೆ ಸರಿ. ಸದರಿ ಚಿದಂಬರಂ ರವರು ಹಲವಾರು ಜನರಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಂಪೂರ್ಣ ಬಡಾವಣೆಯನ್ನು ಸದರಿ ಚಿದಂಬರಂ ರವರು ಎರಡು ಬಾರಿ ನಕ್ಷೆಯನ್ನು ತಯಾರಿಸಿ ಒಂದೊಂದು ಸೈಟ್‌ನ್ನು ಇಬ್ಬಿಬ್ಬರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈ ಸಂಬಂದ ಹಲವಾರು ಸಿವಿಲ್ ದಾವೆಗಳು ಚಾಲ್ತಿಯಲ್ಲಿವೆ ಎಂದರೆ ಗೊತ್ತಿಲ್ಲ. ಸದರಿ ಚಿದಂಬರಂ ರವರು ನನಗೆ ತಪ್ಪು ಜಾಗವನ್ನು ತೋರಿಸಿ ಒಂದು ಚಕ್ ಬಂದಿಯನ್ನು ಸೃಷ್ಟಿಸಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿ ಆ ರೀತಿ ಸೃಷ್ಟಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ ಜವರೇಗೌಡ ರವರ ಮನೆ ಎಂದರೆ ಸಾಕ್ಷಿಯು ಜವರೇಗೌಡ ರವರಿಗೆ ಸೇರಿದ ಸೈಟ್ ನಂ.12 ಇದೆ ಎಂದು ನುಡಿಯುತ್ತಾರೆ. ನವೀನ್ ಮತ್ತು ಜವರೇಗೌಡ ರವರ ಎರಡು ಸ್ವತ್ತು ಒಂದೇ ಎಂದು ನುಡಿಯುತ್ತಾರೆ. ಸದರಿ ಜವರೇಗೌಡ ರವರು ತಾನು ಚಿದಂಬರಂ ರವರಿಂದ ಕ್ರಯಕ್ಕೆ ಪಡೆದ ನಿವೇಶನ ದಕ್ಕದಿರುವ ಕಾರಣ ನವೀನ್ ರವರ ಸೈಟ್ ಅನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ ಎಂದರೆ ಸದರಿ ಸ್ವತ್ತು ಬೇರೆ ನಂಬರ್ ನಿವೇಶನ ಇರುತ್ತದೆ ಎಂದು

ನುಡಿದಿರುತ್ತಾರೆ. ಸದರಿ ಸ್ವತ್ತು ಚಿದಂಬರಂ ರವರು ಮಾರಾಟ ಮಾಡಿದ ಮೇಲೆ ಸದರಿ ಚಿದಂಬರಂ ರವರ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ಸ್ವತ್ತಿನಲ್ಲಿ ನಾವೆ ಇದ್ದೇವೆ ಎಂದು ನುಡಿಯತ್ತಾರೆ.

13. ವಾದಿಯು ತಮ್ಮ ಪರವಾಗಿ ಮಂಜು ರವರು ಪಿ ಡಬ್ಲ್ಯೂ -2 ಆಗಿ ವಿಚಾರಣೆಗೊಳಪಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸಿರುತ್ತಾ ರೆ.

14. ಪಿ.ಡಬ್ಲ್ಯೂ -2 ರವರನ್ನು ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಮಾದಾಪುರದಿಂದ ಚನ್ನರಾಯಪಟ್ಟಣಕ್ಕೆ ಸುಮಾರು 17 ಕಿ ಮೀ ಅಂತರ ಇದೆ. ಮಾದಾಪುರದಿಂದ ಕಿಕ್ಕೇರಿ 5 ಕಿ ಮೀ ಅಂತರ ಇದೆ. ನಾನು ಮಾದಾಪುರದಿಂದ ಚನ್ನರಾಯಪಟ್ಟಣಕ್ಕೆ ದೈನಂದಿನ ವ್ಯವಹಾರಕ್ಕೆ ಆಟೋ ಮತ್ತು ಬೈಕಿನಲ್ಲಿ ಬರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಜವರೇಗೌಡರವರ ನಿವೇಶನ ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ವಾದಿಯು ತಮ್ಮ ಪರವಾಗಿ ಮಹೇಶ ಎಂ ಸಿ ರವರು ಪಿ ಡಬ್ಲ್ಯೂ -3 ಆಗಿ ವಿಚಾರಣೆಗೊಳಪಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

16. ಪಿ.ಡಬ್ಲ್ಯೂ -3 ರವರನ್ನು ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಸ್ವತ್ತಿನಲ್ಲಿರುವ ಮನೆಯು ಸುಮಾರು 10-12 ವರ್ಷಗಳ ಹಿಂದೆ ಕಟ್ಟಲಾಗಿದೆ. ಅದರ ವಿಸ್ತೀರ್ಣ 10 X 15 ಅಡಿ ಇದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇದೆ. ಉತ್ತರಕ್ಕೆ ಕೇಶವಮೂರ್ತಿ ರವರ ಮೂಲೆ ನಿವೇಶನ ಪಶ್ಚಿಮಕ್ಕೆ ಖಾಲಿ ಜಾಗ, ಪೂರ್ವಕ್ಕೆ ಜವರೇಗೌಡರವರ ಮನೆ. ಜವರೇಗೌಡ ರವರ ಮನೆ ಬಾಗಿಲು ಪೂರ್ವ ದಿಕ್ಕಿಗೆ ಇದೆ. ದಾವಾ ಸ್ವತ್ತಿಗೆ ನಾನು ಭೇಟಿ ನೀಡಿ ಸುಮಾರು 3 ವರ್ಷಗಳಾಗಿವೆ. ಈಗ ದಾವಾಸ್ವತ್ತಿನಲ್ಲಿ ಯಾರು ವಾಸ ಇದ್ದಾರೆ ಎಂದು ನಾನು ನೋಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

17. 1ನೇ ಪ್ರತಿವಾದಿಯು ಡಿ.ಡಬ್ಲ್ಯೂ-1 ಆಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ. ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸುತ್ತಾರೆ.

18. ಈ ಹಂತದಲ್ಲಿ 1ನೇ ಪ್ರತಿವಾದಿಯು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿರುತ್ತದೆ. ನಿ.ಡಿ-1, ದಿನಾಂಕಃ25.08.2005 ರ ದೃಡೀಕೃತ ನಕಲು ಕ್ರಯಪತ್ರವಾಗಿದ್ದು, ಶ್ರವಣ ಬೆಳಗೊಳ ಹೋಬಳಿ ಗುರಿಕಾರನ ಹಳ್ಳಿಯಲ್ಲಿ ವಾಸವಾಗಿರುವ ಯಾಲಕ್ಕಿ ಶೆಟ್ಟಿರವರ ಮಗ ರವಿ ಮತ್ತು ಲಕ್ಷೀಶ್ ರವರಿಗೆ ಚನ್ನರಾಯಪಟ್ಟಣ ಟೌನ್, ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ಹೋಬೇಗೌಡರ ಮಗ ಮಂಜಪ್ಪ ರವರು ಚನ್ನರಾಯಪಟ್ಟಣ ತಾಲ್ಲೂಕು ಡಿ. ಕಾಳೇನಹಳ್ಳಿ ಗ್ರಾಮ

ಪಂಚಾಯಿತಿ ವ್ಯಾಪ್ತಿಗೆ ಸೇರಿದ ಅನುಬಂಧ, 1 ರ ಪ್ರಕಾರ ರಿಮ್ಯಾಂಡರ್ ನಂ.68 ಪ್ಲಾಟ್ ನಂ. 2 ರಲ್ಲಿರುವ ನಿವೇಶನದ ನಂ.6 ರ ವಿಸ್ತೀರ್ಣ. ಪೂರ್ವ-ಪಶ್ಚಿಮ 40 ಅಡಿ, ಉತ್ತರ -ದಕ್ಷಿಣ 60 ಅಡಿ ರ ನಿವೇಶನಕ್ಕೆ ಚಕ್ಕು ಬಂಧಿ, ಪೂರ್ವಕ್ಕೆ ಜವರೇಗೌಡರ ನಿವೇಶನ, ಪಶ್ಚಿಮಕ್ಕೆ ಃ20 ಅಡಿ ರಸ್ತೆ, ಉತ್ತರಕ್ಕೆಃ ಹೇಮಲತಾ ಮತು ಹೊಳೆನರಸೀಪುರ ರಸ್ತೆ ಮತ್ತು ದಕ್ಷಿಣಕ್ಕೆ ಬೇರೆಯವರ ನಿವೇಶನ ಎಂದು ನಮೂದು ಆಗಿರುತ್ತದೆ. ನಿ.ಡಿ-2 ದಿನಾಂಕಃ 21.10.1985 ರ ಕ್ರಯಪತ್ರವಾಗಿದ್ದು, ಚನ್ನರಾಯಪಟ್ಟಣ ತಾಲ್ಲೂಕು, ಚನ್ನರಾಯಪಟ್ಟಣ ಟೌನ್ ನಲ್ಲಿ ವಾಸವಾಗಿರುವ ವಾಬೇಗೌಡ ರ ಮಗ ಸಿ.ಬಿ.ಮಂಜಪ್ಪ ರವರಿಗೆ ಇದೇ ಚನ್ನರಾಯಪಟ್ಟಣದ ಗಾಯತ್ರಿ ಬಡಾವಣೆಯಲ್ಲಿ ವಾಸವಾಗಿರುವ ರಾಮಸ್ವಾಮಿ ರವರ ಮಗ ಚಿದಂಬರ್ ರವರು ಚನ್ನರಾಯಪಟ್ಟಣ ತಾಲ್ಲೂಕು, ಡಿ. ಕಾಳೇನಹಳ್ಳಿ ಗ್ರಾಮಕ್ಕೆ ಸೇರಿರುವ ಅನ್ಯ ಸಂಕ್ರಮಣ ವಾಗಿ ಮಂಜೂರು ಆಗಿರುವ ಪೂರ್ವಕ್ಕೆ ಸತ್ಯನಾರಾಯಣ ರವರ ನಿವೇಶನ, ಪಶ್ಚಿಮಕ್ಕೆ ಃ 20 ಅಡಿ ರಸ್ತೆ, ದಕ್ಷಿಣಕ್ಕೆಃ ನನ್ನ ಸ್ವಂತ ಬಾಬ್ತು, ಉತ್ತರಕ್ಕೆ ಃ ಹೋಳೆ ನರಸೀಪುರ ರಸ್ತೆ, ಈ ಮದ್ಯೆ ಇರುವ 40X120 ಅಡಿವುಳ್ಳ ನಿವೇಶನವನ್ನು ನಮಗೆ ಕ್ರಯ ಮಾಡಿಕೊಟ್ಟಿರುವುದಾಗಿ ನಮೂದು ಆಗಿರುತ್ತದೆ. ನಿಡಿ- 3 ಬಿಲ್ಡಿಂಗ್ ಪರವಾನಗಿ ಆಗಿದ್ದು, ಡಿ. ಕಾಳೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ರವಿ ಬಿನ್ ಲಕ್ಷ್ಮೀಶ ಬಿನ್ ಯಾಲಕ್ಕಿ ಶೆಟ್ಟಿ ರವರಿಗೆ ಜಂಟಿ ಇರುವ ಗ್ರಾಮ ಪಂಚಾಯಿತಿ ಡಿ ನಂ.68 ಸ್ವತ್ತಿನ ನಂ.6 ನೇ ನಂಬರ್ ಸೈಟಿನ ಮನೆ ಕಟ್ಟಲು ಪರವಾನಿಗೆ ಕೊಟ್ಟಿದ್ದು, ಅದರ ವಿಸ್ತೀರ್ಣ 40X60 ರ ಪೈಕಿ 30X40 ಕ್ಕೆ ಚೆಕ್ಕು ಬಂದಿ, ಪೂರ್ವಕ್ಕೆ ಃ ಜವರೇಗೌಡ ರ ನಿವೇಶನ, ಪಶ್ಚಿಮಕ್ಕೆ ಃ 20 ಅಡಿ ರಸ್ತೆ, ಉತ್ತರಕ್ಕೆ ಹೇಮಲತ

ಮತ್ತು ಹೊಳೆ ನರಸೀಪುರ ರಸ್ತೆ, ದಕ್ಷಿಣಕ್ಕೆ ಃ ಉಳಿಕೆ ನನ್ನ ನಿವೇಶನ ಎಂದು ನಮೂದು ಆಗಿರುತ್ತದೆ. ನಿಡಿ-4 ಆಸ್ತಿ ಮೇಲಿನ ಋಣಭಾರದ ಪ್ರಮಾಣ ಪತ್ರವಾಗಿದ್ದು, ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯ ಖಾತಾ ನಂ.68 ರ ನಿವೇಶನಕ್ಕೆ ಸಂಬಂದಿಸಿದ ದಾಖಲೆಗಳಾಗಿರುತ್ತವೆ. ನಿಡಿ-5 ಅನುಬಂಧ 1 ರ ದಾಖಲೆಯಾಗಿದ್ದು, ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ 2005-06 ನೇ ಸಾಲಿನ ದಾಖಲೆಯಾಗಿದ್ದು, ರವಿ, ಲಕ್ಷ್ಮೀಶ ಬಿನ್ ಯಾಲಕ್ಕಿ ಶೆಟ್ಟಿ ರವರಿಗೆ ಜಂಟಿ ಯಾಗಿದ್ದು, ಗ್ರಾಮ ಪಂಚಾಯಿತಿ ಡಿ ನಂ. 68 ರ ನಿವೇಶನ ನಂ.6, ಡಿ.ಕಾಳೇನಹಳ್ಳಿ ಹೊರವಲಯ ಯಲ್ಲಿದ್ದು 40X60 ಅಡಿಗಳ ಚಕ್ಕುಬಂದಿ, ಪೂರ್ವಕ್ಕೆ ಃ ಜವರೇಗೌಡರ ನಿವೇಶನ, ಪಶ್ಚಿಮಕ್ಕೆಃ 20 ಅಡಿ ರಸ್ತೆ, ಉತ್ತರಕ್ಕೆ ಃ ಹೇಮಲತಾ ಮತ್ತು ಹೊಳೆ ನರಸೀಪುರ ರಸ್ತೆ, ದಕ್ಷಿಣಕ್ಕೆ ಃ ಬೇರೆಯವರ ನಿವೇಶನ ಎಂದು ನಮೂದು ಆಗಿರುತ್ತದೆ. ನಿಡಿ-6 ರಿಂದ 12 ಕಂದಾಯ ರಸೀದಿಗಳಾಗಿರುತ್ತವೆ. ನಿಡಿ-13 ಮತ್ತು 14 ಅಸಲು ದಾವಾ ನಂ.54/2009 ರ ದೃಡೀಕೃತ ನಕಲು ತೀರ್ಪು ಮತ್ತು ಡಿಕ್ರಿಯ ಪ್ರತಿಯಾಗಿದ್ದು, ಸದರಿ ದಾವೆಯನ್ನು ರವಿ ಬಿನ್ ಯಾಲಕ್ಕಿಶೆಟ್ಟಿ ಮತ್ತು ಲಕ್ಷ್ಮೀಶ ಬಿನ್ ಯಾಲಕ್ಕಿ ಶೆಟ್ಟಿ ರವರು ಈ ದಾವೆಯ ವಾದಿಯಾದ ಶಾರದಮ್ಮ ಕೋಂ ಲೇಟ್ ವಿಜಯಕುಮಾರ್ ರವರ ವಿರುದ್ಧ ಚನ್ನರಾಯಪಟ್ಟಣ ತಾಲ್ಲೂಕು ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಹೆಚ್.ಎನ್ ಪುರ ರಸ್ತೆಯ ಬಾಜುನಲ್ಲಿರುವ ನಿವೇಶನ ಖಾತಾ ನಂ. 68 ರಲ್ಲಿರುವ ನಿವೇಶನದ ವಿಸ್ತೀರ್ಣ ಪೂರ್ವ -ಪಶ್ಚಿಮಃ 40 ಅಡಿ, ಉತ್ತರ-ದಕ್ಷಿಣ- 60 ಅಡಿಗಳುಳ್ಳ ನಿವೇಶನದ ಚಕ್ಕು ಬಂದಿಃ ಪೂರ್ವಕ್ಕೆ ನವೀನ್ ರವರ ನಿವೇಶನ (ಹಾಲಿ

ಜವರೇಗೌಡ ಸ್ವಾಧೀನದಲ್ಲಿರುವ ಸ್ವತ್ತು), ಪಶ್ಚಿಮಕ್ಕೆ 20 ಅಡಿ ರಸ್ತೆ, ಉತ್ತರಕ್ಕೆ ಹೇಮಲತಾ ರವರ ನಿವೇಶನ ದಕ್ಷಿಣಕ್ಕೆ ಗೋಪಿನಾಥ ರವರ ನಿವೇಶನ ಈ ಸ್ವತ್ತಿಗೆ ಸಂಬಂದಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ ದಾವೆಯು ವಾದಿಯ ಪರವಾಗಿ ಡಿಕ್ರಿಯಾಗಿದ್ದು, ಪ್ರತಿವಾದಿಯ(ಶಾರದಮ್ಮ) ವಿರುದ್ದ ಯಾರು ತಂಟೆ, ತಕರಾರು ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವಾಗಿರುತ್ತದೆ. ನಿಡಿ 15 ದಿನಾಂಕಃ26.1.2014 ರ ಆರ್.ಎ.ನಂ.244/2014 ರ ತೀರ್ಪಿನ ಪ್ರತಿಯಾಗಿದ್ದು, ಸದರಿ ಮೇಲ್ಮನವಿಯನ್ನು ಅಸಲು ದಾವೆ ನಂ.154/2009 ರ ಪ್ರತಿವಾದಿಯಾದ ಶಾರದಮ್ಮ ರವರು ವಾದಿಗಳಾದ ರವಿ ಮತ್ತು ಲಕ್ಷ್ಮೀಶ ರವರ ವಿರುದ್ದ ಸಲ್ಲಿಸಿದ ಮೇಲ್ಮನವಿಯಾಗಿದ್ದು ವಜಾ ಆಗಿರುತ್ತದೆ.

19. ವಾದಿಯು ಪ್ರಸ್ತುತ ದಾವೆಯನ್ನು ಸಲ್ಲಿಸಿ, ದಾವಾ ಸ್ವತ್ತಿಗೂ ಮತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಯ ದಾವಾಸ್ವತ್ತಿನ ಚಕ್ಕು ಬಂದಿಗೂ ಮತ್ತು ಪ್ರತಿವಾದಿಯ ಸ್ವತ್ತಿಗೂ ಯಾವುದೇ ವಿಧದಲ್ಲಿಯೂ ತಾಳೆ ಆಗುವುದಿಲ್ಲ. ದಾವಾಸ್ವತ್ತಿನ ಚಕ್ಕುಬಂದಿಯಲ್ಲಿ ದಾವಾಸ್ವತ್ತಿನ ಪೂರ್ವಕ್ಕೆ ಕಾಣಿಸಿರುವ ಜವರೇಗೌಡರ ಸ್ವಾಧೀನದಲ್ಲಿರುವ ಸ್ವತ್ತು ಮತ್ತು ನವೀನ್ ಎಂಬುವವರ ನಿವೇಶನಗಳೆರಡು ಬೇರೆ ಬೇರೆಯಾಗಿದ್ದು, ಯಾವುದೇ ಸಂಬಂಧವಿರುವುದಿಲ್ಲ. ಪ್ರತಿವಾದಿಯರು ನವೀನ್ ಮತ್ತು ಜವರೇಗೌಡರ ನಿವೇಶನ ಎರಡೂ ಒಂದೇ ಆಗಿರುತ್ತದೆ ಎಂದು ಸುಳ್ಳು ಸ್ಪಷ್ಟನೆ ಮಾಡಿ, ಜವರೇಗೌಡರಿಗೆ ಸೇರಿದ 12 ನೇ ನಂಬರ್ ನ ನಿವೇಶನದ

ಪಶ್ಚಿಮ ದಿಕ್ಕಿನ ಭಾಗದಲ್ಲಿರುವ ದಾವಾಸ್ವತ್ತು ವಾದಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ವಾದಿಸಿರುತ್ತಾರೆ.

20. ನಿಪಿ 1 ಮತ್ತು 14 ಧೃಡೀಕೃತ ಕ್ರಯಪತ್ರಗಳಾಗಿದ್ದು, ದಿನಾಂಕಃ 06.01.1992 ರಂಂದು ಚಿದಂಬರ್ ಬಿನ್ ರಾಮಸ್ವಾಮಯ್ಯರವರು ವಾದಿಯಾದ ಶಾರದಮ್ಮ ರವರಿಗೆ ನಿಪಿ 1 ರ ಪ್ರಕಾರ ದಾವಾ ಸ್ವತ್ತನ್ನು ಅದೇರೀತಿ, ನಿಪಿ 14 ರ ಪ್ರಕಾರ ಕೇಶವ ಮೂರ್ತಿ ಬಿನ್ ಶ್ರೀಕಂಠಯ್ಯ ನವರಿಗೆ 1 ನೇ ನಿವೇಶನವನ್ನು ಕ್ರಯ ಮಾಡಿಕೊಟ್ಟಿದ್ದು, ಅದರಲ್ಲಿ ದಾವಾಸ್ವತ್ತಿನ ಪೂರ್ವಕ್ಕೆ ಜವರೇಗೌಡ ರವರ 12 ನೇ ನಿವೇಶನ ಎಂದು, ನಿಪಿ 14 ರ ಕೇಶವ ಮೂರ್ತಿ ಯವರ ಸ್ವತ್ತಿನ ಪೂರ್ವಕ್ಕೆ ಜವರೇಗೌಡ ರವರ 11 ನೇ ನಿವೇಶನ ಎಂದು ನಮೂದಿಸಲಾಗಿರುತ್ತದೆ.

21. ಸದರಿ ಚಿದಂಬರ್ ರವರಿಗೆ 40X120 ಅಡಿಗಳ ನಿವೇಶನವಿದ್ದು, ಅವುಗಳನ್ನು 40X60 ಅಡಿಗಳ 2 ನಿವೇಶನ ಮಾಡಿ, ವಾದಿಯಾದ ಶಾರದಮ್ಮ ರವರಿಗೆ 1 ನಿವೇಶನ ಮತ್ತು ಇನ್ನೊಂದನ್ನು ಕೇಶವ ಮೂರ್ತಿಯವರಿಗೆ ದಿನಾಂಕಃ 6.01.1992 ರಂದು ಮಾರಾಟ ಮಾಡಿದ್ದಾಗಿರುತ್ತದೆ.

22. ನಿಪಿ 16 ದಿನಾಂಕಃ 25.08.2005 ರ ಕ್ರಯಪತ್ರವಾಗಿದ್ದು, ಇದನ್ನು ಪ್ರತಿವಾದಿಗಳಿಗೆ ಮಂಜಪ್ಪ ಬಿನ್ ವಾಬೇಗೌಡರು ಡಿ. ಕಾಳೇನಹಳ್ಳಿ ಹೊರವಲಯದ ನಿವೇಶನ ಅನುಬಂಧ 1 ರ ಪ್ರಕಾರ ಡಿಮ್ಯಾಂಡ್ ನಂಬರ್ 68 ಮತ್ತು ಬ್ಲಾಕ್ ನಂಬರ್ 2 ರಲ್ಲಿರುವ ನಿವೆಶನದ ನಂಬರ್ 6 ರಲ್ಲಿನ 40X60 ಅಡಿಗಳ ನಿವೇಶನದ ಚಕ್ಕು ಬಂದಿಃ ಪೂರ್ವಕ್ಕೆ - ಜವರೇಗೌಡ ರವರ ನಿವೇಶನ, ಪಶ್ಚಿಮಕ್ಕೆ- 20 ಅಡಿ ರಸ್ತೆ, ಉತ್ತರಕ್ಕೆ-

ಹೇಮಲತಾ ಮತ್ತು ಹೊಳೆನರಸೀಪುರ ರಸ್ತೆ, ದಕ್ಷಿಣಕ್ಕೆ: ಬೇರೆಯವರ ನಿವೇಶನ ಎಂದು ನಮೂದು ಮಾಡಿ ಮಾರಾಟ ಮಾಡಿದ್ದಾಗಿರುತ್ತದೆ. ಸದರಿ ದಾಖಲೆಯ ಪ್ರಕಾರ ವಾದಿಯ ದಾವಾಸ್ವತ್ತು ಪ್ರತಿವಾದಿಗಳ ಸ್ವತ್ತಿನ ಯಾವುದೇ ಚಕ್ಕುಬಂದಿಯಲ್ಲಿಯೂ ಬರುವುದಿಲ್ಲ. ಅಲ್ಲದೇ, ವಾದಿಯು ಜವರೇಗೌಡರಿಗೆ ಸೇರಿದ 12 ನೇ ನಂಬರ್ ನ ನಿವೇಶನದ ಪಶ್ಚಿಮಕ್ಕೆ ಇರುವ ದಾವಾಸ್ವತ್ತು ವಾದಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ವಾದಿಸಿದ್ದು, ಈ ಅಂಶವನ್ನು ರುಜುವಾತುಪಡಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

23. ಅದೇ ರೀತಿ, ಪ್ರತಿವಾದಿಗಳು ವಾದಿಯ ವಿರುದ್ಧ ಅಸಲು ದಾವಾ 154/2009 ರಲ್ಲಿ ನಿಪಿ 16 ರ ಸ್ವತ್ತಿಗೆ ತೊಂದರೆ ನೀಡದಂತೆ ಶಾಶ್ವತ ನಿರ್ಬಂಧ ಕಾಜ್ಞೆ ಆದೇಶ ಕೋರಿದ್ದು, ವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶದ ಡಿಕ್ರಿಯನ್ನು ಮಾಡಿದ್ದು, ಸದರಿ ಡಿಕ್ರಿಯನ್ನು ಇಲ್ಲಿಯವರೆಗೂ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ.

24. ಅದೇರೀತಿ, ದಾವಾ ಸ್ವತ್ತು ಮತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಒಂದೇ ಎಂದು ವಾದಿಯು ವಾದಿಸಿದ್ದು, ಅಸಲು ದಾವಾ 154/2009 ರ ಡಿಕ್ರಿಯ ಲಾಭ ಪಡೆದು ವಾದಿಯು ಮಾಧಾಪುರಕ್ಕೆ ಹೋಗಿದ್ದಾಗ, ಪ್ರತಿವಾದಿಗಳು ಅಕ್ರಮವಾಗಿ ದಾವಾಸ್ವತ್ತಿನ ಮನೆಯ ಒಳಗೆ ಸೇರಿಕೊಂಡಿದ್ದು, ವಾದಿಯು ದಾವಾಸ್ವತ್ತಿನ ಒಳಗೆ ಬಾರದಂತೆ ಬೆದರಿಕೆ ಹಾಕಿದ್ದಾಗಿರುತ್ತದೆ ಎಂದು ದಾವೆಯಲ್ಲಿ ಹೇಳಿರುತ್ತಾರೆ. ಅಲ್ಲದೇ, ವಾದಿಯು ತನ್ನ ದಾವಾದಲ್ಲಿ ದಾವಾ ಷಡ್ಯೂಲ್ ನಿವೇಶನಕ್ಕೆ ಗ್ರಾಮ ಪಂಚಾಯಿತಿ

ಯವರು ಡಿ.ನಂ.48 ಎಂಬುವುದಾಗಿ ಹೊಸ ನಂಬರ್ ಅನ್ನು ನೀಡಲಾಗಿರುತ್ತದೆ ಎಂದು ವಾದಿಸಿ ನಿಪಿ-3 ನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗ, 2012-2013 ನೇ ಸಾಲಿನ ಅನುಬಂಧ 1 ರ ದಾಖಲೆಯಾಗಿದ್ದು, ಇದರಲ್ಲಿ ನಿವೇಶನ ಎಂದು ನಮಾದಾಗಿದ್ದು, ಕಲ್ನಾರು ಶೀಟ್ ನ ಮನೆ ಇರುವುದಾಗಿ ನಮೂದು ಮಾಡಿರುವುದಿಲ್ಲ. ಆದರೆ, ದಾವಾ ಅನುಸೂಚಿಯಲ್ಲಿ ದಾವಾಸ್ವತ್ತಿನ ನಿವೇಶನದ ಖಾತಾ ನಂಬರ್ 216 ರ ಪೈಕಿ 2 ನೇ ಬ್ಲಾಕ್ ನಲ್ಲಿರುವ 2 ನೇ ನಂಬರ್ ನ ನಿವೇಶನದಲ್ಲಿರುವ 1 ಕಲ್ನಾರು ಶೀಟಿನ ಮನೆಯನ್ನು ಒಳಗೊಂಡಂತೆ ನಿವೆಶನ 40X60 ಅಡಿಗಳು ಎಂದು ತೋರಿಸಿರುತ್ತಾರೆ. ಆದುದರಿಂದ, ನಿಪಿ 1 ರ ಕ್ರಯ ಪತ್ರದಂತೆ 1991 ರಿಂದ 2012-13 ರ ವರೆಗಿನ ಖಾತಾ ದಾಖಲೆಗಳನ್ನು ಮತ್ತು ಮನೆ ಕಟ್ಟಲು ಪಂಚಾಯಿತಿ ಯಿಂದ ಪಡೆದಿರುವ ಲೈಸೆನ್ಸ್ ಮತ್ತು ವಿದ್ಯುತ್ ನ ಸಂಪರ್ಕ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇರುವುದು ಮತ್ತು ಅಸಲು ದಾವಾ 154/2009 ರ ಡಿಕ್ರಿಯನ್ನು ಮೇಲ್ಮನವಿಯಲ್ಲಿ ಪ್ರಶ್ನಿಸದೇ ಪ್ರಸ್ತುತ ದಾವಯನ್ನು ಸಲ್ಲಿಸಿ, ದಾವಾ ಸ್ವತ್ತಿನಲ್ಲಿ ತಾನೂ ಶಾಂತಿಯುತ ಸ್ವಾಧೀನವನ್ನು ಹೊಂದಿದ್ದು, ಪ್ರತಿವಾದಿಯು ತನ್ನ ಸ್ವಾಧೀನಾನುಭವಕ್ಕೆ ತೊಂದರೆ ನೀಡಿರುತ್ತಾರೆ ಎಂದು ವಾದಿಸುವುದು ಕಾನೂನು ಬದ್ದವಾಗಿ ಸಮಂಜಸವಾಗಿರುವುದಿಲ್ಲ.

25. ಅಲ್ಲದೇ, ಪ್ರಾಸಾ 3 ರವರು ದವಾಸ್ವತ್ತಿನಲ್ಲಿ ಯಾರು ವಾಸವಿದ್ದಾರೆ ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದುದರಿಂದ, ಸದರಿಯವರ ಸಾಕ್ಷ್ಯದಿಂದ ವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನ ಹೊಂದಿಲ್ಲ ಎಂಬುವುದು

ಸ್ಪಷ್ಟವಾಗುತ್ತದೆ. ಆದ ಕಾರಣ, ದಾವಾಸ್ವತ್ತಿನ ನಿಖರವಾದ ಭೌತಿಕ ಅಸ್ತಿತ್ವದ ಬಗ್ಗೆ ರುಜುವಾತುಪಡಿಸುವ ಹೊಣೆಗಾರಿಕೆಯು ವಾದಿಯ ಮೇಲೆಯೇ ಇದ್ದು, ಅದನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

26. ಆದರೆ, ಪ್ರತಿವಾದಿಗಳು ತಾವು ಖರೀದಿ ಮಾಡಿದ ನಂತರ ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದು ಮನೆಯನ್ನು ಕಟ್ಟಿ ವಿದ್ಯುತ್ ಸಂಪರ್ಕ ಪಡೆದು ತಾವೇ ಮಾಲೀಕರಾಗಿ ಸ್ವಾಧೀನಾನುಭವ ಹೊಂದಿರುವುದಾಗಿ ಪ್ರತಿವಾದಿಸಿ ನಿಡಿ 1 ರಿಂದ 15 ದಾಖಲೆಗಳನ್ನು ಹಾಜರುಪಡಿಸಿ ಪ್ರತಿವಾದ ಪತ್ರದ ಅಂಶಗಳನ್ನು ರುಜುವಾತುಪಡಿಸಿರುತ್ತಾರೆ. ಸದರಿ ದಾಖಲೆಗಳನನು ಪರಿಶೀಲಿಸಿದಾಗ, ದಾವಾ ಸ್ವತ್ತು ಮತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಒಂದೇ ಆಗಿರುವುದಿಲ್ಲ ಹಾಗೂ ವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ.

27. ವಾದಿಯು ತಾನೂ ದಾವಾಸ್ವತ್ತಿನ ನಿರುಪಾಧಿಕ ಮಾಲೀಕನಾಗಿದ್ದು, ಸ್ವಾಧೀನಾನುಭವವನ್ನು ಹೊಂದಿರುತ್ತೇನೆ ಎಂಬುವುದನ್ನು ಮೌಖಿಕ ಸಾಕ್ಷ್ಯಧಾರಗಳ ಮೂಲಕವಾಗಿ ಅಥವಾ ದಸ್ತಾವೇಜು ಸಾಕ್ಷ್ಯಗಳ ಮೂಲಕವಾಗಲೀ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದ ಕಾರಣ ವಾದಿಯು ದಾವೆಯಲ್ಲಿ ಪ್ರಾರ್ಥಿಸಿರುವಂತೆ ದಾವಾಸ್ವತ್ತಿನ ಮಲೀಕನೆಂದು ಮತ್ತು ಸ್ವಾಧೀನಾನುಭವಕ್ಕೆ ತೊದರೆ ನೀಡದಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಪಡೆಯಲು ಅರ್ಹರಾಗಿರುವುದಿಲ್ಲ.

28. ದಾವಾ ಹಾಕುವ ಒಂದು ವಾರದ ಮೊದಲು ಪ್ರತಿವಾದಿಯು ಅಸಲು ದಾವಾ 154/2009 ರಲ್ಲಿನ ಡಿಕ್ರಿಯ ಲಾಭ ಪಡೆದು ವಾದಿಯು ಆಕೆಯ ಊರಿಗೆ ಹೋಗಿದ್ದ

ಸಂದರ್ಭದಲ್ಲಿ ಅಕ್ರಮವಾಗಿ ದಾವಾಷೆಡ್ಯೂಲ್ ನ ಮನೆಗೆ ಸೇರಿಕೊಂಡಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಲು ಹೋದಾಗ, ನ್ಯಾಯಾಲಯದಿಂದ ಪ್ರತಿವಾದಿಯ ಪರವಾಗಿ ಡಿಕ್ರಿಯಾಗಿರುತ್ತದೆ ಎಂದು ದೂರನ್ನು ಸ್ವೀಕರಿಸಿರುವುದಿಲ್ಲ ಎಂದು ವಾದಿಸಿರುತ್ತಾರೆ. ಅಸಲು ದಾವಾ 154/2009 ರ ದಾವೆಯಲ್ಲಿ ದಿನಾಂಕಃ 25.08.2005 ರ ಕ್ರಯಪತ್ರ, ಮನೆಯ ಕಟ್ಟಡದ ಪರವಾನಿಗೆ ಪತ್ರವನ್ನು ಪರಿಗಣಿಸಿ, ವಾದಿಯೇ (ಪ್ರತಿವಾದಿ) ಕ್ರಯಪತ್ರದ ಸ್ವತ್ತಿನಲ್ಲಿ ಸ್ವಾಧೀನ ಇದ್ದು, ಅವರ ಸ್ವಾಧೀನಕ್ಕೆ ಪ್ರತಿವಾದಿಯ (ವಾದಿ) ತೊಂದರೆ ನೀಡಿರುತ್ತಾರೆ ಎಂಬುವುದನ್ನು ಸಾಕ್ಷ್ಯಾಧಾರಗಳ ಮೂಲಕ ರುಜುವಾತು ಆಗಿರುವುದನ್ನು ಪರಿಗಣಿಸಿ ದಾವೆಯನ್ನು ದಿಃ 07.01.2014 ರಂದು ನ್ಯಾಯಾಲಯವು ಡಿಕ್ರಿ ಮಾಡಿರುತ್ತದೆ. ಸದರಿ ಡಿಕ್ರಿಯಾದ ನಂತರ ಪ್ರಸ್ತುತ ದಾವೆಯನ್ನು ದಿಃ02.09.2014 ರಂದು ವಾದಿಯು ಪ್ರತಿವಾದಿಯ ವಿರುದ್ಧ ದಾವಾಸ್ವತ್ತಿನ ಮಾಲೀಕಳೆಂದು ಘೋಷಿಸಿ ದಾವಾಸ್ವತ್ತಿನ ಸ್ವಾಧೀನವನ್ನು ಬಿಟ್ಟು ಕೊಡುವಂತೆ ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ. ಆದರೆ, ಪ್ರತಿವಾದಿಯ ಅಸಲು ದಾವಾ 154/2009 ರ ಡಿಕ್ರಿಯಾದ ನಂತರ ಪ್ರತಿವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಯಾವಾಗ ಮತ್ತು ಯಾವ ರೀತಿ ತಾನೂ ಹೊಂದಿದ್ದು, ದಾವೆಯನ್ನು ಹಾಕುವ 1 ವಾರದ ಮೊದಲು ಪ್ರತಿವಾದಿಯು ದಾವಾಸ್ವತ್ತಿನ ಮನೆಯ ಸ್ವಾಧೀನವನ್ನು ಅಕ್ರಮವಾಗಿ ಹೊಂದಿರುತ್ತಾರೆ ಎಂಬುವುದನ್ನು ರುಜುವಾತುಪಡಿಸುವ ಹೊಣೆಗಾರಿಕೆ ವಾದಿಯ ಮೇಲೆಯೇ ಇರುತ್ತದೆ. ಆದರೆ, ಅಸಲು ದಾವೆ 154/2009 ರ ಡಿಕ್ರಿಯಾದ ನಂತರ ಪ್ರತಿವಾದಿಯಿಂದ ದಾವಾಸ್ವತ್ತಿನ ಸ್ವಾಧೀನವನ್ನು ಕಾನೂನು ಬದ್ಧವಾಗಿ

ಹೊಂದಿರುತ್ತೇನೆ ಎಂಬುವುದನ್ನು ದಾಖಲಾತಿಗಳ ಮೂಲಕವಾಗಲೀ ಅಥವಾ ಮೌಖಿಕ ಸಾಕ್ಷ್ಯಾಧಾರಗಳ ಮೂಲಕವಾಗಲೀ ರುಜುವಾತುಪಡಿಸಿರುವುದಿಲ್ಲ. ಆದುದರಿಂದ, ವಾದಿಯು ತಾನೂ ದಾವಾಸ್ವತ್ತಿನ ಸ್ವಾಧೀನವನ್ನು ಹೊಂದಿದ್ದೇನೆ ಎಂಬುವುದನ್ನು ರುಜುವಾತುಪಡಿಸದೇ ಪ್ರತಿವಾದಿಯು ಅಕ್ರಮವಾಗಿ ದಾವಾಸ್ವತ್ತಿನ ಸ್ವಾಧೀನವನ್ನು ವಾದಿಯು ಇಲ್ಲದಿದ್ದಾಗ ಹೊಂದಿರುತ್ತಾರೆ ಎಂಬುವುದಾಗಿ ಪರಿಗಣಿಸಲು ಸಾಧ್ಯವಿಲ್ಲ.

29. ಈಗಾಗಲೇ, ಚರ್ಚಿಸಿರುವಂತೆ ವಾದಿಯು ತನ್ನ ಕ್ರಯಪತ್ರದಲ್ಲಿ ನಮೂದಿಸಿರುವ ಸ್ವತ್ತು ಮತ್ತು ದಾವಾಸ್ವತ್ತು ಒಂದೇ ಎಂಬುವುದನ್ನು ಸಾಕ್ಷಾಧಾರಗಳ ಮೂಲಕ ರುಜುವಾತಪಡಿಸಬೇಕಾಗುತ್ತದೆ. ಅದೇರೀತಿ, ದಾವೆಯಲ್ಲಿ ಹೇಳಿರುವ ಪ್ರಕಾರ ಕ್ರಯಪತ್ರದಂತೆ ಖರೀದಿಸಿದ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡು ಸ್ವಾಧೀನ ಹೊಂದಿದ್ದೆನು ಎಂಬುವುದನ್ನು ವಾದಿಯು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಸದರಿ ಎರಡು ಸ್ವತ್ತುಗಳು ಬೇರೆ ಬೇರೆಯಾಗಿರುತ್ತವೆ ಎಂಬುವುದನ್ನು ದಾಖಲಾತಿಗಳನ್ನು ಹಾಜರುಪಡಿಸಿ ರುಜುವಾತುಪಡಿಸಬೇಕಾಗುತ್ತದೆ. ಆದರೆ ಸಾಕ್ಷಾಧಾರಗಳ ಮೂಲಕ ದಾವಾಂಶಗಳನ್ನು ರುಜುವಾತುಪಡಿಸದೇ ಕೇವಲ ಮೌಖಿಕವಾಗಿ ವಾದಿಸಿದರೆ ಸಾಲದು, ಆದಕಾರಣ ವಾದಿಯು ತಾನು ಕ್ರಯಪತ್ರದಡಿ ದಾವಾಸ್ವತ್ತನ್ನು ಖರೀದಿಸಿದ್ದು, ಅದರ ಕಾನೂನುಬದ್ದ ಸ್ವಾಧೀನಾನುಭವವನ್ನು ಹೊಂದಿದ್ದಾಳೆ ಎಂದು ನಿರ್ಣಯಿಸುವುದು ಸಮಂಜಸವಲ್ಲ.

30. ಈಗಾಗಲೇ ಚರ್ಚಿಸಿರುವಂತೆ ಅಸಲು ದಾವಾ 154/2009 ರ ದಾವಾಸ್ವತ್ತು ಮತ್ತು ಪ್ರತಿವಾದ ಪತ್ರದಲ್ಲಿನ ಸ್ವತ್ತು ಒಂದೇ ಆಗಿದ್ದು, ಪ್ರತಿವಾದಿಯು

ದಾವಾಸ್ವತ್ತಿನಲ್ಲಿರುವ ಮನೆಯಲ್ಲಿ ಕಾನೂನುಬದ್ಧನಾಗಿ ಸ್ವಾಧೀನ ಹೊಂದಿದ್ದು, ದಾವಾಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ. ಅಸಲು ದಾವಾ 154/2009 ರಲ್ಲಿಯೇ ಪ್ರತಿವಾದಿಯು ದಾವಾಸ್ವತ್ತಿನ ಸ್ವಾಧೀನ ಹೊಂದಿದ್ದಾರೆ ಎಂದು ನ್ಯಾಯಾಲಯದಿಂದ ಡಿಕ್ರಿಯಾಗಿದ್ದು, ಪ್ರತಿವಾದಿಯೇ ಕಾನೂನುಬದ್ಧ ಸ್ವಾಧೀನವನ್ನು ಹೊಂದಿದ್ದು, ಅದಕ್ಕೆ ವಾದಿಯು ತೊಂದರೆ ನೀಡಿರುತ್ತಾರೆ ಎಂಬುವುದನ್ನು ಪರಿಗಣಿಸಿ ವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ನೀಡಿದ್ದಾಗಿರುತ್ತದೆ. ಆದುದರಿಂದ, ವಾದಿಯು ದಾವಾಸ್ವತ್ತಿನ ಸ್ವಾಧೀನ ಹೊಂದಿಲ್ಲ, ಆದ ಕಾರಣ ಪ್ರತಿವಾದಿಯು ದಾವಾಸ್ವತ್ತಿನ ಸ್ವಾಧೀನಾನುಭವಕ್ಕೆ ತೊಂದರೆ ಕೊಡುವ ಪ್ರಮೇಯವೇ ಉದ್ಭವವಾಗುವುದಿಲ್ಲ. ಅಲ್ಲದೇ, ವಾದಿಯು ದಾವಾ ಸ್ವತ್ತಿನ ಸ್ವಾಧೀನ ಹೊಂದಿರದಿದ್ದರೂ ಸತ್ಯ ಸಂಗತಿಯನ್ನು ಮರೆಮಾಚಿ ಶುದ್ಧ ಹಸ್ತದಿಂದ ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂಬುವುದನ್ನು ದಾವಾಸ್ವತ್ತಿನ ಸ್ವಾಧೀನವನ್ನು ಅಸಲು ದಾವಾ 154/2009 ನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ದಿನದಿಂದಲೂ ತಾನೇ ಇದ್ದು, ವಾದಿಯೂ ದಾವಾಸ್ವತ್ತಿನ ಮಾಲೀಕಳಲ್ಲ ಮತ್ತು ಸ್ವಾಧೀನ ಹೊಂದಿಲ್ಲ ಎಂಬುವುದನ್ನು ಸಾಕ್ಷ್ಯಧಾರಗಳಿಂದ ಪ್ರತಿವಾದಿಯು ರುಜುವಾತುಪಡಿಸಿರುತ್ತಾರೆ. ಆದುದರಿಂದ, ಪ್ರತಿವಾದಿಯು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿರುತ್ತಾರೆ ಎಂದು ಪರಿಗಣಿಸಲು ಸಾಧ್ಯವಿಲ್ಲ.

31. ವಾದಿಯು ಪ್ರಸ್ತುತ ದಾವೆಯಲ್ಲಿ ದಾವಾ ಸ್ವತ್ತು ಮತ್ತು ಪ್ರತಿವಾದಿಯು ದಿಃ25.08.2005 ರಂದು ಖರೀದಿಸಿದ ಸ್ವತ್ತು ಎರಡು ಒಂದೇ ಆಗಿದ್ದು, ಪ್ರತಿವಾದಿಯು

ಅಸ್ತಿತ್ವದಲ್ಲಿ ಇಲ್ಲದ ಸ್ವತ್ತಿಗೆ ದಾವಾಸ್ವತ್ತಿನ ಚಕ್ಕುಬಂದಿಯನ್ನು ನಮೂದಿಸಿಕೊಂಡು ದಾವಾಸ್ವತ್ತನ್ನು ತಾನೂ ಖರೀದಿಸಿರುವ ಸ್ವತ್ತು ಎಂದು ಸುಳ್ಳು ಸಂಗತಿಗಳನ್ನು ಸೃಷ್ಟಿಸಿಕೊಂಡು ವಾದಿಗೆ ಸೇರಿದ ಸ್ವತ್ತಿಗೆ ಅಕ್ರಮವಾಗಿ ಬಂದು ಸ್ವಾಧೀನ ಹೊಂದಿದ್ದಾರೆ ಎಂದು ವಾದಿಸಿರುತ್ತಾರೆ.

32. ಈ ಹಂತದಲ್ಲಿ ನಿ.ಪಿ 2, 3 ಮತ್ತು 10 ರ ಬಗ್ಗೆ ಚರ್ಚಿಸುವುದು ಅವಶ್ಯವಾಗಿರುತ್ತದೆ. ನಿಪಿ 2, 10 ಗ್ರಾಮ ಪಂಚಾಯಿತಿಯವರು ನೀಡಿರುವ ಅನುಬಂಧ 1 ರ ದಾಖಲೆಯಾಗಿದ್ದು 2012-13 ನೇ ಸಾಲಿನದ್ದಾಗಿದ್ದು, ಗ್ರಾಮ ಪಂಚಾಯಿತಿಯ D ನಂ. 48 ರ ಸ್ವತ್ತು ವಾದಿಯ ಹೆಸರಿನಲ್ಲಿದ್ದು 40X60 ಅಡಿಗಳ ನಿವೇಶನ ಇರುವುದಾಗಿ ನಮೂದಾಗಿರುತ್ತದೆ. ಅದೇರೀತಿ, ನಿಪಿ-3 ರ ದಾಖಲೆ 2012-13 ನೇ ಸಾಲಿನ ಡಿಮ್ಯಾಂಡ್ ರಿಜಿಸ್ಟರ್ ಪ್ರತಿಯಾಗಿದ್ದು, ಅಸೆಸ್ಮೆಂಟ್ ನಂ.48 ರ ಸ್ವತ್ತಿಗೆ ಸಂಬಂಧಿಸಿದ್ದು, ಸದರಿ ದಾಖಲೆಯಲ್ಲಿ ಸ್ವತ್ತಿನ ವಿವರ, ವಿಸ್ತೀರ್ಣ, ಚಕ್ಕಬಂದಿಯನ್ನು ನಮೂದಿಸಿರುವುದಿಲ್ಲ. ನಿಪಿ 2 ರಲ್ಲಿ ದಾವಾಸ್ವತ್ತು ನಿವೇಶನ ಎಂದು ನಮೂದಾಗಿದ್ದು, ಸದರಿ ಸ್ವತ್ತಿನಲ್ಲಿ ಮನೆ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ವಾದಿಯು ದಾವೆಯಲ್ಲಿ ಹೇಳಿರುವಂತೆ ದಾವೆ ಸಲ್ಲಿಸಿದಾಗ ದಾವಾಸ್ವತ್ತಿನಲ್ಲಿ ಮನೆ ಇರುವುದಿಲ್ಲ, ಕೇವಲ ನಿವೇಶನ ಇರುತ್ತದೆ ಎಂಬುವುದು ಸ್ಪಷ್ಟವಾಗುತ್ತದೆ. ಆದಕಾರಣ ವಾದಿಯು ಪ್ರತಿವಾದಿಗೆ ಸೇರಿದ ಮನೆಯನ್ನು ತನ್ನ ಮನೆ ಎಂದು ಮತ್ತು ಸದರಿ ಮನೆ ದಾವಾಸ್ವತ್ತಿನಲ್ಲಿ ಇದೆ ಎಂಬುವುದಾಗಿ ವಾದಿಸಿ ದಾವೆ ಸಲ್ಲಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಅಲ್ಲದೇ, ವಾದಿಯು ದಾವೆಯನ್ನು ವಾಸ್ತವಿಕ ಸಂಗತಿಗಳನ್ನು ಮರೆ

ಮಾಚಿ ಶುದ್ಧ ಹಸ್ತದಿಂದ ಸಲ್ಲಿಸಿರುವುದಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ.

33. ಪ್ರತಿವಾದಿಯು ನಿಡಿ 1 ರಂತೆ ನಿವೇಶನವನ್ನು ಖರೀದಿಸಿ, ಅದರಲ್ಲಿ ನಿಡಿ 3 ರಂತೆ ಗ್ರಾಮ ಪಂಚಾಯಿತಿಯಿಂದ ಕಟ್ಟಡ ಪರವಾನಿಗೆ ಪಡೆದು ಮನೆಯನ್ನು 2009 ರಲ್ಲಿ ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಅದೇರೀತಿ, ಸದರಿ ಮನೆಗೆ ಕಂದಾಯ ರಸೀದಿಯನ್ನು ಪ್ರತಿವಾದಿಯು ಪಾವತಿಸಿರುವುದು ನಿಡಿ 4 ರಿಂದ 12 ರ ಮೂಲಕ ಸಾಬೀತಾಗಿರುತ್ತದೆ. ಆದಕಾರಣ, ದಾವಾಸ್ವತ್ತು ಮತ್ತು ಪ್ರತಿವಾದಿಗೆ ಸೇರಿದ ಸ್ವತ್ತು ಒಂದೇ ಆಗಿದ್ದು, ವಾದಿಯು ಖರೀದಿಸಿರುವ ಸ್ವತ್ತು ಅಸ್ತಿತ್ವದಲ್ಲಿರುತ್ತದೆ ಎಂಬುವುದನ್ನು ವಾದಿಯು ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

34. ಈ ಹಂತದಲ್ಲಿ ಸಿ.ಪಿ.ಸಿ.ಯ ಕ್ರಮಾದೇಶ 7 ನಿಯಮ 3 ನ್ನು ನಮೂದಿಸುವುದು ಸಮಂಜಸವಾಗಿರುತ್ತದೆ.

> **3.** *ದಾವೆಯ ವಸ್ತು ವಿಷಯವು ಸ್ಥಿರಸ್ವತ್ತಾಗಿರುವಲ್ಲಿ ದಾವೆಯ ವಸ್ತು ವಿಷಯವು ಸ್ಥಿರ ಸ್ವತ್ತಾಗಿರುವಲ್ಲಿ ಅದನ್ನು ಗುರುತಿಸಲು ಸಾಕಾಗುವಷ್ಟರ ಮಟ್ಟಿಗೆ ಅದರ ವರ್ಣನೆಯನ್ನು ವಾದಪತ್ರದಲ್ಲಿ ನಮೂದಿಸತಕ್ಕದ್ದು ಮತ್ತು ಅಂಥ ಸ್ವತ್ತನ್ನು ಕಂದಾಯ ವ್ಯವಸ್ಥೆಯ ಅಥವಾ ಮೋಹಣಿಯ ದಾಖಲೆಯಲ್ಲಿರುವ ಚಕ್ಕುಬಂದಿಗಳಿಂದ ಅಥವಾ ಸರ್ವೆ ನಂಬರುಗಳಿಂದ ಗುರುತಿಸಬಹುದಾಗಿದ್ದ ಸಂದರ್ಭದಲ್ಲಿ*, *ವಾದ ಪತ್ರದಲ್ಲಿ ಅಂಥ ಚಕ್ಕುಬಂದಿಗಳನ್ನು ಅಥವಾ ಸರ್ವೆ ನಂಬರುಗಳನ್ನು ನಿರ್ದಿಷ್ಟವಾಗಿ ನಮೂದಿಸತಕ್ಕದ್ದು*.

ಪ್ರಸ್ತುತ ದಾವೆಯಲ್ಲಿ ವಾದಿಯು ದಾವಾಸ್ವತ್ತಿನಲ್ಲಿ ಮನೆ ಇದೆ ಎಂಬುವುದಕ್ಕೆ ಮತ್ತು ಮನೆಯನ್ನು ಗುರುತಿಸುವಷ್ಟರ ಮಟ್ಟಿಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

35. ಒಂದು ಹಕ್ಕು ಘೋಷಣೆ ದಾವೆಯಲ್ಲಿ, ಮೊದಲು ವಾದಿಯು ತನ್ನ ಹಕ್ಕು ಮತ್ತು ಶೀರ್ಷಿಕೆ (title) ಯುಳ್ಳ ದಾಖಲೆಗಳನ್ನು ಹಾಜರುಪಡಿಸಿ, ತನ್ನ ಹಕ್ಕು ಮತ್ತು ಶೀರ್ಷಿಕೆಯನ್ನು ರುಜುವಾತುಪಡಿಸಬೇಕೇ ಹೊರತು, ಪ್ರತಿವಾದಿಗಳು ಅವರ ದಾವೆಯನ್ನು ರುಜುವಾತುಪಡಿಸಿಲ್ಲ ಎಂಬ ಆಧಾರದ ಮೇಲೆ ತನ್ನ ಹೊಣೆಗಾರಿಕೆಯನ್ನು ಪೂರೈಸಿದ್ದೇನೆಂದು ವಾದಿಸುವುದು ಸಮಂಜಸವಲ್ಲ.

36. ಈ ಹಂತದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪುಜನ್ಯ ವರದಿಯಾದ (2004) 10 SCC 779 (between Karnataka board of wakf vs Govt of India ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಈ ಕೆಳಕಂಡತೆ ವರದಿ ತೀರ್ಪನ್ನು ನೀಡಿರುತ್ತದೆ.

> ***S.34 Suit for declaration and ownership and title over immovable property-proof-held., must be proved by admissible evidence and recrods-In a title suit of civil nature, there is no scope for historical facts and claims-Reliance on borderline historical facts would lead to erroneous conclusion-plaintiff filing title suit should be very clear about origin of title over the property and must specifically plead it-Civil Procedure Code, 1908-Or 6 R.4.***

ಈ ಮೇಲಿನ ತೀರ್ಪಿನ ರೀತ್ಯಾ ವಾದಿಯು ದಾವೆಯಲ್ಲಿ ಹೇಳಿರುವ ಚೆಕ್ಕುಬಂದಿಯ ನಡುವೆ ದಾವಾ ಸ್ವತ್ತು ಅಸ್ತಿತ್ವದಲ್ಲಿದ್ದು, ಅದರ ನಿರುಪಾಧಿಕ ಮಾಲೀಕನಾಗಿ, ಸ್ವಾಧೀನಾನುಭವವನ್ನು ಹೊಂದಿದ್ದೇನೆ ಎಂಬುದನ್ನು ದಾಖಲಾತಿಗಳ ಮೂಲಕ ರುಜುವಾತುಪಡಿಸಬೇಕೆ ಹೊರತು ಕೇವಲ ವಾದಿಸಿದರೆ ಸಾಲದು.

37. ಈ ಹಂತದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಜನ್ಯ ವರದಿಯಾದ ***(1998) 9 SCC 719 (between Ramdas vs. Salim Ahmed)*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ.

> ***5.34 Declaration of title to the suit property - Weakness in defendant's claim for title to the property cannot establish plaintiff's title-plaintiff not entitled to get declaration of title if such title could not be established by him by leading convincing evidence -High Court failed to consider the specific finding made by the lower appellate court that the plaintiff had failed to establish its title.***

ಮೇಲ್ಕಂಡ ತೀರ್ಪಿನ ರೀತ್ಯ ವಾದಿಯು ನ್ಯಾಯಾಲಯದಲ್ಲಿ ದಾವಾ ಆಸ್ತಿಯ ಮೇಲೆ ತನ್ನ ಹಕ್ಕನ್ನು ರುಜುವಾತುಪಡಿಸಬೇಕೇ ಹೊರತು ಪ್ರತಿವಾದಿಯು ತನ್ನ ಹಕ್ಕನ್ನು ರುಜುವಾತುಪಡಿಸಲು ವಿಫಲವಾಗಿರುವುದನ್ನೇ ತನ್ನ ಸಾಧನೆಯಾಗಿ ವಾದಿಯು ಪರಿಗಣಿಸಲು ಸಾಧ್ಯವಿಲ್ಲ.

38. ಆದಕಾರಣ, ವಾದಿಯು ದಾವಾಸ್ವತ್ತಿನ ಕಾನೂನು ಬದ್ಧ ಮಾಲೀಕಳು ಎಂದು ಸಾಕ್ಷಾಧಾರಗಳ ಅನುಪಸ್ಥಿತಿಯಲ್ಲಿ ನಿರ್ಣಯಿಸಲು ಬರುವುದಿಲ್ಲ. ವಾದಿಯು ದಾವಾಸ್ವತ್ತಿನ ಮಾಲೀಕಳೆಂದು ರುಜುವಾತುಪಡಿಸಲು ವಿಫಲರಾಗಿರುವ ಕಾರಣ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ವಿವಾದಂಶ 1 ರಿಂದ 4 ಅನ್ನು ನಕಾರಾತ್ಮಕವಾಗಿ ಎಂದು ಉತ್ತರಿಸಲಾಗಿದೆ.

39. ವಿವಾದಾಂಶ ಸಂಖ್ಯೆ **-5:** ಈ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳು ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸುತ್ತದೆ.

## ಆದೇಶ

ವಾದಿಯು ಸಲ್ಲಿಸಿರುವ ದಾವೆಯನ್ನು ವಜಾ ಮಾಡಲಾಗಿದೆ.

ಈ ಮೇಲಿನಂತೆ ಡಿಕ್ರಿ ತಯಾರಿಸಲು ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 08 ನೇ ದಿವಸ ಏಪ್ರಿಲ್ ಮಾಹೆ 2026 ರಂದು ನಾನು ಘೋಷಿಸಿದ್ದೇನೆ.)

**(ಪುರುಷೋತ್ತಮ ಟಿ.ಪಿ.)**
1 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.

-: <u>ಅನುಬಂಧ</u> :-

<u>ವಾದಿ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿಃ</u>

ಪಿ.ಡಬ್ಲ್ಯೂ -1 : ಶಾರದಮ್ಮ
ಪಿ.ಡಬ್ಲ್ಯೂ -2 : ಮಂಜುನಾಥ
ಪಿ.ಡಬ್ಲ್ಯೂ -3 : ಮಹೇಶ

<u>ವಾದಿ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ</u>

ನಿ.ಪಿ-1 : ಮೂಲ ಕ್ರಯ ಪತ್ರ
ನಿಪಿ 2 : ಖಾತಾ ಎಕ್ಸ್‌ಟ್ರಾಕ್ಟ್
ನಿಪಿ 3 : ಡಿಮಾಂಡ್ ರಿಜಿಸ್ಟರ್
ನಿಪಿ 4-5 : ಕಂದಾಯ ಪಾವತಿ ರಸೀಧಿಗಳು
ನಿಪಿ-6-8 : ಕ್ರಯ ಪತ್ರದ ದೃಡೀಕೃತಿಗಳು
ನಿ.ಪಿ-9 : ರಸೀದಿ
ನಿ.ಪಿ-10 : ಖಾತಾ ಎಕ್ಸ್‌ಟ್ರಾಕ್ಟ್
ನಿಪಿ-11 : ದಿಃ 4-2-1984 ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ 12 : ದಿಃ 08.09.1989ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ-13 : ದಿಃ 6-12-1990 ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ 14 : ದಿಃ 6-1-1992 ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ 15 : ದಿಃ 16-8-1996ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ 16 : ದಿಃ 25-8-2005 ರ ಕ್ರಯ ಪತ್ರದ ದೃಢೀಕೃತ ನಕಲು

<u>ಪ್ರತಿವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿಃ</u>

ಡಿ.ಡಬ್ಲ್ಯೂ -1 : ರವಿ

<u>ಪ್ರತಿವಾದಿಯರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ</u>

ನಿ.ಡಿ-1 : ದಿಃ 25.08.2005ರ ಮೂಲ ಕ್ರಯಪತ್ರ
ನಿಡಿ-2 : ದಿಃ 21.10.1985ರ ಕ್ರಯಪತ್ರದ ದೃಢೀಕೃತ ನಕಲು
ನಿಡಿ-3 : ಪರವಾನಿಗೆ
ನಿಡಿ -4 : ಋಣಭಾರ ಪ್ರಮಾಣಪತ್ರ
ನಿಡಿ-5 : ಕರ ನಿರ್ಧರಣಾ ಪತ್ರ
ನಿಡಿ-6 ರಿಂದ 12 : ತೆರಿಗೆ ರಶೀದಿಗಳು

ನಿಡಿ 13 ಮತ್ತು14: ಅಸಲು ದಾವಾ ಸಂಖ್ಯೆಃ 154/2009ರ ತೀರ್ಪು ಮತ್ತು ಡಿಕ್ರಿ
ನಿಡಿ 15 : ಆರ್ ಎ ನಂಃ 244/2014ರ ಆದೇಶದ ದೃಢೀಕೃತ ನಕಲು

**(ಪುರುಷೋತ್ತಮ ಟಿ.ಪಿ.)**
1 ನೇ ಅಧಿಕ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.